ಬಗೆಹರಿಸಬೇಕಾಗುತ್ತದೆ......By mutual understanding we have to solve this problem, not by way of threat or by any other manner. ಮಾನ್ಯ ಸದಸ್ಯರಾದ ಬಾವಿಯವರು ಹೇಳಿದ ಹಾಗೆ ಉದ್ದೇಶಪೂರ್ವಕವಾಗಿ ತೊಂದರೆ ಮಾಡುತ್ತಾರೆಂದು ಭಾವಿಸಿಲ್ಲ. ಒಂದು ವೇಳೆ ಆ ತರಹ ನಮ್ಮ ಮೀನುಗಾರರಿಗೆ ತೊಂದರೆ ಕೊಡಬೇಕೆಂದು ಪ್ರಯತ್ನ ಮಾಡಿದ್ದರೆ, ಆ ವಿಷಯ ಸರ್ಕಾರಕ್ಕೆ ಗೊತ್ತಾದರೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಆ ರೀತಿ ನಾವು ಭಾವಿಸಿಕೊಂಡು ಹೇಳುವುದು ಸರಿಯಲ್ಲ. ಈ ವಿಷಯವನ್ನು ಕೇಂದ್ರದವರೆಗೂ ತೆಗೆದು ಕೊಂಡು ಹೋಗಬೇಕಾಗಿಲ್ಲ. ಆ ರೀತಿ ಮಾಡಿದ್ದರೆ, ನಮಗಿಂತ ಅವರಿಗೆ ಕಷ್ಟ ಜಾಸ್ತಿ. ಕರ್ನಾಟಕದವರು ಕೇರಳದಲ್ಲಿ ಹೋಗಿ ಜೀವನ ಮಾಡುವವರು ಯಾರೂ ಇಲ್ಲ. ಕರ್ನಾಟಕದಲ್ಲಿ ಕೇರಳದವರು ಜೀವನ ಮಾಡುವವರ ಪರ್ಸೆಂಟ್ ಜಾಸ್ತಿ ಇದೆ. ಆ ರೀತಿ ಮಾಡಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ನಮ್ಮವರು ಮೀನು ಹಿಡಿಯಲು ಸಮುದ್ರದ ಒಳಗಡೆ ಹೋಗಿದ್ದಾರೆ. ಜನಸಂಖ್ಯೆಯು ಆಧಾರ ತೆಗೆದು ಕೊಂಡರೆ ನಮಗಿಂತ ಅವರಿಗೇ ಕಷ್ಟವಾಗುತ್ತದೆ, ಈ ವಿಷಯವನ್ನು ಮಾತುಕತೆಯಿಂದ ಬಗೆಹರಿಸಲು ಪ್ರಯತ್ನ ಮಾಡುತ್ತೇನೆ. ಅಧಿಕಾರಿಗಳು ಕೇರಳದವರ ಜೊತೆಯಲ್ಲಿ ಮಾತನಾಡಿದ್ದಾರೆ, ರಾಜ್ಯಮಟ್ಟದ ಉನ್ನತ ಅಧಿಕಾರಿಗಳನ್ನು ಸಹ ಕಳುಹಿಸಿ ಕೊಡುತ್ತೇನೆ. ಅದರಿಂದಲೂ ಸಾಧ್ಯವಾಗದಿದ್ದರೆ ನಮ್ಮ ಸಂಬಂಧಪಟ್ಟ ಮಂತ್ರಿಗಳನ್ನು ಕೇರಳಕ್ಕೆ ಕಳುಹಿಸಿ ಕೇರಳದ ಮಂತ್ರಿಗಳ ಜೊತೆ ಚರ್ಚೆಮಾಡಿ ಸೂಕ್ತ ಪರಿಹಾರವನ್ನು ಕಂಡುಹಿಡಿಯಬೇಕೆಂಬುದೇ ಸರ್ಕಾರದ ಉದ್ದೇಶವಾಗಿರುತ್ತದೆ. ಈ ರೀತಿ ಪ್ರಯತ್ನ ಮಾಡದೆ ಕೇಂದ್ರ ಸರ್ಕಾರಕ್ಕೆ ಕೇರಳ ಸರ್ಕಾರವನ್ನು ಡಿಸ್‌ಮಿಸ್ ಮಾಡಿ ಎಂದು ಹೇಳುವುದು ಸರಿಯಲ್ಲ. ಮಾನ್ಯ ಬಾವಿಯವರು ವಕೀಲರಾಗಿರಬಹುದು ಎಂದು ಕಾಣುತ್ತದೆ ಇಂಟರ್ ನ್ಯಾಷನಲ್ ಲಾ ಕೋಡ್ 9 ಎ-ಬಿ ಎಂದು ಹೇಳುತ್ತಾ ಬಂದರು ಆದರ ಅವಶ್ಯಕತೆ ಇಲ್ಲ. ಒಂದು ವೇಳೆ ಕಾನೂನು ತಿಳಿಯದೆ ಮಾಡಿದ್ದರೆ ಇಂತಹವುಗಳನ್ನು ಮಾತುಕತೆಯಿಂದ ಒಟ್ಟಿಗೆ ಕುಳಿತು ಚರ್ಚೆಮಾಡಿ ಪರಿಹಾರ ಕಂಡುಹಿಡಿಯ ಬೇಕು. ಪೂರ್ತಿ ವರದಿ ಬಂದ ಮೇಲೆ ಪುನಃ ವರದಿಯನ್ನು ಸದನದ ಮುಂದೆ ಇಡುತ್ತೇನೆ.

re : (ii) Indefinate fast undertaken by Doctors

MR. SPEAKER.—Now I request the Hon. Member Sri P. Ramdev to call the attention of the Minister for Health and Family Welfare to the situation that has arisen due to indefinite fast undertaken by Doctors.

ಶ್ರೀ ಪಿ. ರಾಮದೇವ್.—ಅಧ್ಯಕ್ಷರೆ, ವೈದ್ಯಕೀಯ ವಿದ್ಯಾರ್ಥಿಗಳ ಅನಿರ್ದಿಷ್ಟ ಉಪವಾಸದ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೆ, ನಾವೆಲ್ಲರೂ ಅದಕ್ಕೆ ಧ್ವನಿಗೂಡಿಸುತ್ತೇವೆ.

ಶ್ರೀ ಎ.ಕೆ. ಅಬ್ದುಲ್ ಸಮದ್ (ಆರೋಗ್ಯ ಮಂತ್ರಿಗಳು).

It is a fact that the junior doctors and the medical college students have been on a strike in the State since December 1980. Their strike against the permission granted by the Government to start the Kempegowda Medical College, Bangalore, and Dr. B R. Ambedkar Medical College, Bangalore, in addition, to the abolition of the capitation fee in the other private medical colleges where the system of collection of capitation fee exists.

2. As already stated on the floor of this House, by the Chief Minister discussion were held with the representatives of the striking students and the junior doctors to call of the strike so that, the committee that has already been constituted to go into

the demands of the striking students could meet, complete their study and make recommendations. The suggestions made in the House *viz.*, to enlarge the committee to include the technical experts and the representatives of proffessional bodies were also agreed to. Pursuantly, the matter has been taken up with the authorities of the Indian Midical Council for the nomination of one of their members to serve on this committee. It was suggested to them the possible consideration of one of the members of the IMC available in the State. This proposal was not acceptable to the IMC. The matter has been again taken up with the President of the IMC to nominate a representative to serve on this committee and his reply is still awaited. The Director of Medical Education and the President of the IMA, Karnataka State Branch have already been apprised of their inclussion as members of this committee. The issuance of a Government Order, constituting the committee, is held up for want of nomination of the representative of IMC.

3. The earlier committee constituted by the Government with the Minister for Finance & Tourism, Minister for Health & Family Welfare, the Chief Secretary, and the Health Secretary met and took a decision to address the authorities of the Kempegowda Medical College and Dr. B.R. Ambedkar Medical College, Bangalore, not to go ahead with the admissions till the affiliation of the University is obtained by them. Accordingly, the authorities were also addressed. Besides, this Committee had also held discussions with the representatives of the IMA of State Branch.

4. Discussions were held by the Chief Minister with the representatives of the striking studenta and junior doctors recently on 2-3-1981, when an understanding was reached that the students would call off the strike. But unfortunately the strike has not been called of expect in Gulbarga and Manipal and Mangalore sections of the Kasturba Medical College, Manipal. Further three students belonging to the Bangalore Medical College have started an indefinite hunger strike from 8-3-1981. The condition of these 3 students, at present, is reported to be satisfactory. They have also been examined by a panel of Proffessors of Medicines attached to the college.

5. So far as the situation in the hospitals attached to the medical colleges are concerned, these have been working normally.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಸ್ಟೇಟ್‌ಮೆಂಟ್ ಉಪವಾಸ ಮಾಡತಕ್ಕ ವೈದ್ಯಕೀಯ ವಿದ್ಯಾರ್ಥಿಗಳ ಮುಷ್ಕರವನ್ನು ಮುಕ್ತಾಯ ಮಾಡುವುದಕ್ಕೆ ಯಾವುದೇ ರೀತಿಯ ಅನುಕೂಲ ಇಲ್ಲ. ಮುಷ್ಕರ ಮಾಡತಕ್ಕ ವಿದ್ಯಾರ್ಥಿಗಳಿಗೆ ನಿದ್ದೆ ಇಲ್ಲ, ಎಚ್ಚರ ಇಲ್ಲ. ಆ ರೀತಿ ಇದೆ. ಇದು ಮೂರು ತಿಂಗಳಿಂದಲೂ ಚಳುವಳಿ ನಡೆಯುತ್ತಿದೆ. ಈಗಾಗಲೇ ಮುಖ್ಯ ಮಂತ್ರಿಗಳು ಪ್ರಯತ್ನಪಟ್ಟಿದ್ದಾರೆ. ಅವರ ಪ್ರಯತ್ನ ಸ್ವಲ್ಪ ಮಟ್ಟಿಗೆ ಸ್ಟ್ರೈಕ್ ಕಡಿಮೆ

ಮಾಡುವುದಾಗಿದೆ. ಫಲಿತಾಂಶ ಸಿಕ್ಕಿದೆ. ಆದರೆ ತಾವು ತಮ್ಮ ಸ್ಟೇಟ್‌ಮೆಂಟಿನ ಮೊದಲ ಪ್ಯಾರಾದಲ್ಲಿ ಏನು ಹೇಳುತ್ತಿದ್ದೀರಾ ಎಂದರೆ,

> "Their strike is against the permission granted by the Government to start the Kempegowda Medical College, Bangalore, and Dr. B. R. Ambedkar Medical College, Bangalore.....,"

ಇದು ಅಲ್ಲ ಎಂದು ಅವರು ನೂರು ಬಾರಿ ಹೇಳಿದ್ದಾರೆ. ವಿದ್ಯಾರ್ಥಿಗಳ ಮುಖಕ್ಕೆ ಮಸಿಯನ್ನು ಬಳಿಯುವ ಕೆಲಸವನ್ನು ತಾವು ಏತಕ್ಕೆ ಮಾಡುತ್ತಿದ್ದೀರಿ. ಈ ಎರಡು ಕಾಲೇಜುಗಳ ವಿರುದ್ಧ ಅಲ್ಲ ಎನ್ನುವ ಮಾತನ್ನು ಪೋಸ್ಟರ್ಸ್ ಮುಖಾಂತರ ಹಾಕಿದ್ದಾರೆ. ಅವರ ಬೇಡಿಕೆ ಇಷ್ಟೇ, ಕ್ಯಾಪಿಟೇಷನ್ ಫೀಜು ಅಬಾಲಿಷನ್ ಮಾಡಿ ಎಲ್ಲಾ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿ ಎಂದು. ಈ ಎರಡು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವರ ಬೇಡಿಕೆ ಬಗ್ಗೆ ಡಿಸ್‌ಕಷನ್ ಆಗಿದೆ. ದಿನಾಂಕ ೨-೩-೧೯೮೧ರಲ್ಲಿ ಮುಖ್ಯ ಮಂತ್ರಿಗಳ ಜೊತೆ ಚರ್ಚೆಯಾಗಿದೆ. It is stated that, when an understanding was reached that the students would call off the strike. I want to know what was the understanding that was reached in the meeting between the Chief Minister and the striking students? Please enlighten me. ದಯವಿಟ್ಟು ಹೇಳಬೇಕು, ಅಂಡರ್‌ಸ್ಟ್ಯಾಂಡಿಂಗ್ ಏನೂ ಆಗಿಲ್ಲ. Please enlighten me. ಏನು ಅಂಡರ್‌ಸ್ಟ್ಯಾಂಡಿಂಗ್ ತೆಗೆದುಕೊಂಡರು ಎನ್ನುವುದನ್ನು ತಿಳಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ದೊಡ್ಡ ಸ್ಟ್ರೈಕನ್ನು ರಿಸಾಲ್ವ್ ಮಾಡುವ ಪ್ರಯತ್ನಪಟ್ಟು ಆದಷ್ಟು ಜಯಶಾಲಿಗಳಾಗಿದ್ದಾರೆ. ಸುಮಾರು ೭೫ ದಿವಸ ನಡೆದಿರುವ ಸ್ಟ್ರೈಕ್‌ನಲ್ಲಿರತಕ್ಕ ವಿದ್ಯಾರ್ಥಿಗಳು ಹೆಚ್ಚು ನಮ್ಮ, ನಿಮ್ಮ ಮಕ್ಕಳೇ ಜಾಸ್ತಿ ಇದ್ದಾರೆ. ಇದನ್ನು ಪರಿಹಾರ ಮಾಡುವಂಥ ಶಕ್ತಿ ತಮಗೆ ಇದೆ. ಒಂದು ಅಂಡರ್‌ಸ್ಟ್ಯಾಂಡಿಂಗ್ ಬಂದು ೨-೩-೧೯೮೧ರದ ಕಾಲ್ ಆಫ್ ಮಾಡುತ್ತೇವೆ ಎಂದು ಹೇಳಿದ ಮೇಲೆ ಏತಕ್ಕೆ ಮಾಡಲಿಲ್ಲ...On 2-3-1981 an understanding was reached between the Chief Minister and the striking students. ಅದನ್ನು ಸ್ವಲ್ಪ ದಯವಿಟ್ಟು ಹೇಳಬೇಕು. ಆ ಅಂಡರ್‌ಸ್ಟ್ಯಾಂಡಿಂಗ್ ಬಂದಮೇಲೆ ಇದಕ್ಕೆ ವಿರುದ್ಧವಾಗಿ ಬ್ರೇಕ್ ಮಾಡಿರತಕ್ಕ ಮಂತ್ರಿಗಳು ಯಾರು. ಅಧ್ಯಕ್ಷರೆ, ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿಯೇ ಭಿನ್ನಾಭಿಪ್ರಾಯ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಬಗೆಹರಿಸಬೇಕು. ಕೆಲವು ಮಂತ್ರಿಗಳು ಇದನ್ನು ಬಗೆಹರಿಸಬಾರದು ಎಂದು ಹೇಳುವುದು ಇದೆ ಎಂದು ತಿಳಿದುಬಂದಿದೆ. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಸಿಒಡಿ ರಿಪೋರ್ಟ್ ತರಿಸಿಕೊಂಡು ನೋಡಬೇಕು. ಈಗಾಗಲೇ ವಿದ್ಯಾರ್ಥಿಗಳು ಒಂದು ಪರೀಕ್ಷೆಯನ್ನು ಕಳೆದುಕೊಂಡಿದ್ದಾರೆ. ಈಗ ವಿದ್ಯಾರ್ಥಿಗಳು ಉಪವಾಸ ಕುಳಿತಿದ್ದಾರೆ. Their health is found satisfactory, ಅಂತ ಹೇಳಿದ್ದಾರೆ. ನಾಳೆ ಏನು ಆಗುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಇದರ ಜೊತೆಗೆ ಮೊನ್ನೆ ಕೇಂದ್ರದ ವಿದ್ಯಾ ಮಂತ್ರಿಗಳಾದ ಶಂಕರಾನಂದ್ ಅವರು ಇಲ್ಲಿಗೆ ಬಂದಾಗ ವಿದ್ಯಾರ್ಥಿಗಳ ಬೇಡಿಕೆ ಸರಿ ಇದೆ ಎಂದು ಹೇಳಿದ್ದಾರೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ಗೆ ಪುನಃ ಅಪೀಲು ಮಾಡಿದ್ದಾರೆ. ಇದನ್ನು ಇಟ್ಟುಕೊಂಡು ಪುನಃ ಅವರ ಬೇಡಿಕೆ ಬಿಟ್ಟು ಸುಮ್ಮನೆ ಈ ರೀತಿ ಸ್ಟೇಟ್‌ಮೆಂಟ್ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ದಯವಿಟ್ಟು ಪಾಸಿಟೀವ್ ಆಗಿ ಕೆಲಸ ಮಾಡಿ, please see they call off the strike and students go back to their classes. ಕೊನೆಯದಾಗಿ ಇಲ್ಲಿ ಒಂದು ಮಾತನ್ನು ಹೇಳಿದ್ದಾರೆ. "The matter has been again taken up with the President of the **IMC** to nominate a representative to serve on this committee" ಎಂದು ಹೇಳಿದ್ದಾರೆ. ಇದು ಇವರಿಗೆ ನಾಚಿಕೆಯಾಗುವುದಿಲ್ಲವೆ. ಆಲ್ ಇಂಡಿಯಾ ಬಾಡಿ ರೆಪ್ಯುಟೆಡ್ ಬಾಡಿ. ದಯವಿಟ್ಟು ಅದನ್ನು ಅವರಿಗೆ ಬಿಟ್ಟುಬಿಡಿ. ಅವರು ಯಾರನ್ನು ಹಾಕುತ್ತಾರೆ ಅವರಿಗೆ ಹಾಕಲಿ. ಇದು ನ್ಯಾಯ ಅಲ್ಲ, ಸಮರ್ಪಕ ಅಲ್ಲ. ಒಂದು ಪಾಸಿಟೀವ್ ಸ್ಟೇಟ್‌ಮೆಂಟ್ ಮುಖ್ಯ ಮಂತ್ರಿಗಳು ಮಾಡಿದರೆ ಬಗೆಹರಿಸಲಿಕ್ಕೆ ಆಗುತ್ತದೆ. ದಯವಿಟ್ಟು ಆವೊತ್ತು ಏನು ಆಯಿತು ಮುಂದೆ ಏನು ಮಾಡುತ್ತೀರಿ ಎನ್ನುವುದನ್ನು ಹೇಳಬೇಕು ಎಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ದೊಡ್ಡ ಭಾಷಣಕ್ಕೆ ಪ್ರಾರಂಭ ಮಾಡದೇ ಪಾಯಿಂಟುಗಳನ್ನು ಮಾತ್ರ ತಿಳಿಸಬೇಕು.

SRI JEEVARAJ ALVA.—Mr. Speaker Sir, it is most unfortunate that the Hon'ble Minister has again deliberately tried to mislead the House, Sir, as Mr. Ramdev put it, it has been made very clear, often 101 times, that the agitation is not against the opening of medical colleges-either about Vokkaliga Medical College or about Dr. Ambedkar Medical College. Last time an effort was made where the entire subject was diverted and it was said that agitation was politically motivated and particularly against Harijans starting a medical college. Naturally, Sri Arumugham, veteran colleague, was little agitated over the matter and with repeated assurance from the Members and with repeated press statements it was made clear to the Government aud the Members of this House that the agitation was not at all against the starting of these two particular colleges.

Sir, with all these assertions it is unfortunate that over and again the same thing is being repeated. The High Power Committee was instructed to give a decision within a specific time. The Hon. Chief Minister was kind enough to say that at the earliest the High Power Committee will submit its report on major issues like capitation fee and nationalisation of medical colleges. Sir, subsequently the High Power Committee did not meet at all. I am told that when the delegation met the Hon. Chief Minister the chief Minister told them to call off the strike first then he would see that High Power Committee would meet.Thiswas the precondition put bytheChief Minister. I amnot certain about this but I was told so.The Hon. ChiefMinister on the floor ofthis House stated that High Power Committee would submit its report at the earlist and a decision would be taken and the two colleges which were allowed to function would be asked to go slow on admission. I would appeal to the Hon. Chief Minister who has taken steps to resolve the public sector undertaking strike which is going on for the last 70 days to make a similar effort in this direction also and resolve the issues concering the medical students. Then Sir, there is a delay in announcing the representative from Karnataka to the Indian Medical Council. I do not know why the Government insists upon a particular nominee in the Indian Medical Council. Why they wanted a particular person from Bangalore to Indian Medical Council. The Indian Medical Council is a technical body. No one can question them nor we can ask them to appoint a particular person. This issue has got to be solved without any further delay. Keeping all this in view I want a categorical assurance from the Hon. Chief Minister that he would take steps to convene the meeting of the High Power Committee and recommend to the Government to settle the demands of the

students and junior doctors. I hope the Chief Minister would do his best to resolve these issues at the earliest.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸಚಿವರ ಹೇಳಿಕೆ ನಮ್ಮ ಈ ಸದನದ ಮುಂದಿದೆ ಯಾವ ವೈದ್ಯಕೀಯ ವಿದ್ಯಾರ್ಥಿಗಳು ನಿರಶನ ವ್ರತವನ್ನು ಮಾಡುತ್ತಿದ್ದಾರೆ ಅವರ ಬಳಿಗೆ ನಾನೇ ಹೋಗಿ ಅವರೊಡನೆ ಮಾತನಾಡಿಕೊಂಡು ಬಂದಿದ್ದೇನೆ. ಮಾನ್ಯ ಸಚಿವರು ತಮ್ಮ ಹೇಳಿಕೆಯ ಮೊದಲನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆಂದರೆ, ಆ ವೈದ್ಯಕೀಯ ವಿದ್ಯಾರ್ಥಿಗಳು, ಜೂನಿಯರ್ ಡಾಕ್ಟರ್‌ಗಳು ಯಾವುದೋ ಎರಡು ವಿಚಾರಗಳಿಗೋಸ್ಕರ ಸ್ಟ್ರೈಕ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಅದು ಸತ್ಯಕ್ಕೆ ದೂರವಾದ ಅಂಶ. ಖಂಡಿತ ಅಲ್ಲ. ನನಗೆ ತಿಳಿದುಬಂದ ಮಾಹಿತಿ ಪ್ರಕಾರ ಆ ವಿದ್ಯಾರ್ಥಿಗಳು. ಮತ್ತು ಜೂನಿಯರ್ ಡಾಕ್ಟರ್‌ಗಳು ಯಾವುದೇ ಮೆಡಿಕಲ್ ಕಾಲೇಜನ್ನೂ ತೆರೆಯುವ ವಿರುದ್ಧವಾಗಿ, ಸ್ಟ್ರೈಕ್ ಮಾಡುತ್ತಿಲ್ಲ. ಅವರು ಒಂದು ತತ್ವಕ್ಕೆ ವಿರುದ್ಧವಾಗಿ ಮಾಡುತ್ತಿದ್ದಾರೆ. ನಾವು ಈಗ ಇದರ ಸಾಧ್ಯಸಾಧ್ಯತೆ ಬಗ್ಗೆ ಹೇಳಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ರಾಮದೇವ್‌ರವರು ಹೇಳಿದಂತೆ ಕ್ಯಾಬಿನೆಟ್‌ನಲ್ಲಿ ಈ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಕೂಡ ಇಲ್ಲವೆ. ಈ ರೀತಿ ಮಾನ್ಯ ಸದಸ್ಯರು ಹೇಳುವುದಾದರೆ ಸ್ಟ್ರೈಕ್ ಮುಕ್ತಾಯವಾಗುವುದಕ್ಕೆ ಸಹಕಾರಿಯಾಗುವುದಿಲ್ಲ. ಈ ತಪ್ಪು ಎಲ್ಲಿದೆ ಎಂಬುದನ್ನು ನಾನು ಹೇಳುತ್ತೇನೆ. ಕ್ಯಾಬಿನೆಟ್‌ನಲ್ಲಿ.........

ಶ್ರೀ ಅಜೀಜ್ ಸೇಠ್.—ಮಾನ್ಯ ಸಭಾಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್. ಏನೆಂದರೆ, ಕ್ಯಾಬಿನೆಟ್‌ನಲ್ಲಿ ನಡೆಯತಕ್ಕ ವಿಚಾರಗಳೆಲ್ಲವೂ ಬಹಳ ಸೀಕ್ರೆಟ್ ಆಗಿರುತ್ತವೆ. Hon'ble Shri Mallur Anandrao knows about the Cabinet secrets and therefore he was saying something about medical strike. I would like to know whether he is authorised to speak for Cabinet? Has he been authorised to reply on behalf of the Minister or the Chief Minister when both of them are present in the House?

MR. SPEAKER.—Neither Shri Ramdeo knows about the Cabinet secrets nor Shri Mallur Anand Rao said that he knows about it. There is no point of order.

ಶ್ರೀ ಮಳ್ಳೂರು ಆನಂದರಾವ್.—ಕ್ಯಾಬಿನೆಟ್ ಡಿಸಿಷನ್ ಏನು? ಅಲ್ಲಿ ಏನು ನಡೆಯುತ್ತದೆ ಎಂಬುದನ್ನು ಹೇಳುತ್ತಿಲ್ಲ. ಕ್ಯಾಬಿನೆಟ್ ಮಂತ್ರಿಯವರು ಹೇಳಿದ ಮಾತನ್ನು ಹೇಳಿದೆ. ವಿದ್ಯಾರ್ಥಿಗಳು ಸ್ಟ್ರೈಕ್ ಏನು ಮಾಡುತ್ತಿದ್ದಾರೆ ಅದು ಸರಿಯೋ ತಪ್ಪೋ ಗೊತ್ತಿಲ್ಲ. ಇದರಲ್ಲಿ ಒಬ್ಬರಿಗೊಬ್ಬರಿಗೆ ಸರಿಯಾದ ಅಂಡರ್‌ಸ್ಟ್ಯಾಂಡಿಂಗ್ ಇಲ್ಲ.

ಶ್ರೀ ಅಜೀಜ್‌ಸೇಠ್ —ಮಾನ್ಯ ಆನಂದರಾವ್‌ರವರು ಹೇಳಿದ ಮಾತು ನಾರದ ಹೇಳಿದಂತಾಯಿತು. ನಾರದನಿಲ್ಲದಿದ್ದರೆ ರಾಮಾಯಣವೇ ಅರ್ಥ ಆಗುವುದಿಲ್ಲ. ಮಾನ್ಯ ಗುಂಡೂರಾಯರ ರಾಮಾಯಣಕ್ಕೆ ಮಾನ್ಯ ಆನಂದರಾಯರು ನಾರದರಾಗಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಜೀಜ್‌ಸೇಠ್‌ರವರು ರಾಮಾಯಣದಲ್ಲಿ ನಾರದನನ್ನು ಎಲ್ಲಿಂದ ತಂದರು.

ಶ್ರೀ ಎಸ್. ಶಿವಯ್ಯ.—ಮಾನ್ಯ ಅಜೀಜ್‌ಸೇಠ್‌ರವರೇ ಒಂದು ರಾಮಾಯಣವನ್ನು ಏತಕ್ಕೆ ಬರೆದಿರಬಾರದು ?

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಅಜೀಜ್ ಸೇಠ್‌ರವರು ಪ್ರತಿ ಕ್ಷಣಕ್ಕೂ ನಿಂತು ಮಾತನಾಡುತ್ತಲೇ ಇರುತ್ತಾರೆ. ಇದು ಸರಿಯಲ್ಲ. ಈಗ ಅಲ್ಲಿ ಸ್ಟ್ರೈಕ್ ಮಾಡುತ್ತಿರುವ ವಿದ್ಯಾರ್ಥಿಗಳ ಡಿಮ್ಯಾಂಡ್ಸ್ ಇಷ್ಟೆ. ಇರತಕ್ಕ ತತ್ವದ ಆಧಾರದ ಮೇಲೆ ಹೋರಾಟ ಮಾಡುವುದು, ಮತ್ತು ಮೆಡಿಕಲ್ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿ ಕ್ಯಾಪಿಟೇಷನ್ ಫೀಸ್‌ನ್ನು ರದ್ದು ಮಾಡುವುದು. ಇದು ಅವರ ಮೇಜರ್ ಡಿಮ್ಯಾಂಡ್. ರಾಜ್ ಕಮಿಟಿ ರಿಪೋರ್ಟಿನ ಆಧಾರದಮೇಲೆ ಇದನ್ನು ಮಾಡಿ ಎಂದು ಅವರು ಹೇಳುತ್ತಿದ್ದಾರೆ. ನೀವು ಎಷ್ಟೇ ಮೆಡಿಕಲ್ ಕಾಲೇಜುಗಳನ್ನು ತೆರೆದರೂ ಅದಕ್ಕೆ

ಇವರ ವಿರೋಧವಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರು ಬೇಕು. ಇದು ಅವರಿಗೂ ಗೊತ್ತಿದೆ. ಹೆಚ್ಚು ಹೆಚ್ಚು ಮೆಡಿಕಲ್ ಕಾಲೇಜುಗಳನ್ನು ತೆರೆದರೆ ಹೆಚ್ಚು ಜನ ಡಾಕ್ಟರ್‌ಗಳು ಬರುತ್ತಾರೆ ಆಮೇಲೆ ನಮಗೆ ಕೆಲಸ ಸಿಕ್ಕುವುದಿಲ್ಲ ಎಂಬ ಸ್ವಾರ್ಥ ಅವರಲ್ಲಿಲ್ಲ. ತಾವು ಈ ರೀತಿ ಭಾವಿಸ ಬೇಡಿ. ಆದರೆ ನೀವು ಕ್ಯಾಪಿಟೇಷನ್ ಫೀಸ್‌ನ್ನು ತೆಗೆದುಕೊಂಡು ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಾರಾಟ ಮಾಡಿ ವೈದ್ಯಕೀಯ ವೃತ್ತಿಗೆ ಇರತಕ್ಕ ಘನತೆ ಗೌರವಗಳನ್ನು ಹಾಳುಮಾಡುತ್ತಿದ್ದೀರಿ ಎಂಬುದೇ ಅವರ ವಾದ. ಆದರೆ ಇದರಲ್ಲಿ ಸರ್ಕಾರದ ನೀತಿಯನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಂಡಿಲ್ಲ. ಈ ಸೀಟುಗಳ ಹಂಚಿಕೆ ವಿಚಾರದಲ್ಲಿ ವಿಪುಲವಾದ ಚರ್ಚೆ ನಡೆದಿದೆ. ಕ್ಯಾಪಿಟೇಷನ್ ಫೀಸ್ ವಿಚಾರದಲ್ಲಿ ಚರ್ಚೆ ಮಾಡಿದ್ದೇವೆ, ಬೇರೆ ಬೇರೆ ದೇಶಗಳಿಂದ ಬರತಕ್ಕವರಿಗೇ ಅಲ್ಲ, ನಮ್ಮ ದೇಶ ದವರಿಗೂ ಕೂಡ ರಿಸರ್ವೇಷನ್ ಏನು ಕೊಡಬೇಕೋ ಅದನ್ನೂ ಕೊಟ್ಟಿದ್ದೇವೆ, ಮಾನ್ಯ ಹಾವನೂರು ಕಮಿಟಿ ರಿಪೋರ್ಟ್ ಪ್ರಕಾರ ೧೮ ಪರ್ಸೆಂಟ್ ಏನು ಕೊಡಬೇಕೋ ಅದನ್ನೂ ಕೂಡ ಕೊಟ್ಟಿದ್ದೇವೆಂದು ಸುಮಾರು ಅರ್ಧ ಗಂಟೆಯ ಕಾಲ ಕುಳಿತುಕೊಂಡು ಎಲ್ಲ ವಿಚಾರಗಳನ್ನೂ ವಿವರವಾಗಿ ಮಾನ್ಯ ಮಂತ್ರಿ ಯವರು ಹೇಳಿದ್ದಾರೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ ನೀವು ಈ ಮೆಡಿಕಲ್ ಕಾಲೇಜುಗಳನ್ನೆಲ್ಲಾ ನ್ಯಾಷನಲೈಸ್ ಮಾಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಒಂದು ಮಾತನ್ನು ಮಾತ್ರ ತಮಗೆ ಹೇಳಬಯಸುತ್ತೇನೆ. ಅದು ಏನೆಂದರೆ, ಉಡುಪಿಯಲ್ಲಿರತಕ್ಕ ಕಸ್ತೂರಿಬಾ ಮೆಡಿಕಲ್ ಕಾಲೇಜನ್ನು ನೀವು ನ್ಯಾಷನಲೈಸ್ ಮಾಡಿಕೊಳ್ಳಬೇಕಾದರೆ ನಮ್ಮ ಹೆಲ್ತ್ ಮಿನಿಸ್ಟರ್‌ರವರ ಖಾತೆಗೆ ಬಜೆಟ್‌ನಲ್ಲಿ ಕೊಟ್ಟಿರತಕ್ಕ ಹಣವನ್ನೆಲ್ಲಾ ತೆಗೆದುಕೊಂಡು ಹೋಗಿ ಕೊಟ್ಟರೂ ಈ ಕಾಲೇಜನ್ನು ನೀವು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಕೇಂದ್ರ ಸರ್ಕಾರದವರು ತೆಗೆದುಕೊಳ್ಳುವುದಾದರೆ ನಾವು ಉಚಿತವಾಗಿ ಕೊಡುತ್ತೇವೆಂದು ಅಧಿಕೃತವಾಗಿ ಹೇಳಿದ್ದಾರೆ. ನಿಮಗೆ ಮನಸ್ಸಿದ್ದರೆ. ಏತಕ್ಕೆ, ನೀವೇ ತೆಗೆದುಕೊಳ್ಳ ಬಾರದು ?

SRI K. H. SRINIVAS.—I raise a point of order. My hon. friend Shri Mallur Anand Rao is also a signatory to this calling attention. notice. May be after being in the ruling party he has come to know several things. That is not our concern at the moment. Though he may be knowing certain things I feel that is not proper on this part to reply for the Government when the Chief Minister is here. So, he may please confine to the subject matter of the calling attention notice.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಶ್ರೀನಿವಾಸ್‌ರವರಿಂದ ನಾನು ಕಲಿಯಬೇಕಾದ್ದು ಏನೂ ಇಲ್ಲ. ಸರ್ಕಾರದ ಅಭಿಪ್ರಾಯ ಏನು ಎಂಬುದನ್ನು ತಿಳಿದುಕೊಂಡು ಹೇಳುವ ಅಧಿಕಾರ ನನಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹಾಗೆಂದರೆ ಹೇಗೆ ? ನಾನು ಸದಸ್ಯನಾಗಿಯೂ ಮಾತನಾಡು ತ್ತೇನೆ, ಸ್ಪೀಕರ್ ಆಗಿ ರೂಲಿಂಗ್‌ನ್ನೂ ಕೊಡುತ್ತೇನೆ ಎಂದು ನೀವು ಹೇಳುವುದಾದರೆ ಇದರ ಅರ್ಥ ಏನು?

3.00 P. M,

SRI B. V, KAKKILAYA.—Sir, on a point of order...

MR. SPEAKER.—Sri K. H. Srinivas has already raised a point of order.

SRI B. V. KAKKILAYA,—Sir, as the subject, which we are discussing, is a very serious matter, I request you to make it convenient to allow for a full dressed debate.

ಅಧ್ಯಕ್ಷರು.—ಅವರೇ ಇದನ್ನು ಕಳುಹಿಸಿದ್ದಾರೆ, ತಾವು ಡಿಸ್‌ಕಸ್ ಮಾಡಬೇಕೆಂದು ಹೇಳಿದರೆ it must be strictly confined total issue ವಿಷಯ ಬೇರೆ ಹೇಳಿದ್ದರೆ ಅದು ಸರಿಯಾದ ಕ್ರಮವಲ್ಲ ಎಂದು ಹೇಳಬಹುದಿತ್ತು, ಅದರಲ್ಲಿ ಸಾರಾಂಶ ಇದೆ. ಸರಕಾರಕ್ಕೆ ಸಹಾಯ ಮಾಡ ತಕ್ಕಂಥ ರೀತಿಯಲ್ಲಿ ತಾವು clarificfiation ಕೇಳುವುದಿದ್ದರೆ ಕೇಳಿ. ಅದಕ್ಕೆ ನಾನು ಹೇಳುವುದೇನೆಂದರೆ ರೂಲ್ ನಂಬರ್ ೬೩ ರಂತೆ ಒಂದು ಸ್ಟೇಟ್‌ಮೆಂಟ್ ಮಾಡಿದದೋಲೆ, there ends the matter usually. But, sometimes Members are given permission to seek clarifications. Unfortunately, what happend is, he debate went on taking advantage of the matter. being seized by the House and being raised by Members again. Please confine yourselves to the matter. On other occasions, you can speak elaborately.

SRI C. M. ARUMUGHAM.—Sir, of course, this is a calling attention notice, but the matter is very important. This issue is very important and it is going on. This is the third time, the matter is coming up in this form. In view of the seriousness of the subject matter, I request you to convert this notice into 312 or allot 2 hours time so that we can discuss and authorities can think of taking action on this issue. As you have allowed Sri Mallur Anand Rao to speak, I thought and hoped that you would also allow me to speak for a few minutes. That apart, if you could kindly allow two hours to discuss it tomorrow, we can discuss it in depth and come to some conclusion instead of confining the discussion to a few Members only. This is a very serious matter, let us have a full dressed debate. Instead of somebody saying something and going away with it, let us see what is the depth of the problem and whether the agitation is against the starting of 2 Medical colleges only. We must know about it, Let the truth come out.

SRI H. GANGADHARAN,—We support Sri C. M. Arumugham.

ಶ್ರೀ ಮಳ್ಳೂರ್ ಆನಂದರಾವ್.—ತಮ್ಮ ಅಪ್ಪಣೆ ತಾವು ಎನು ಹೇಳುತ್ತೀರೋ ಹಾಗೆ.

MR. SPEAKER.—He is on his legs.

SRI C. M. ARUMUGHAM.—The hon. Member Sri Mallur Anand Rao can speck for half-an-hour, we are prepared to hear him. We have heard him when he was in the Opposition side.

ಶ್ರೀ ಭಾವುರಾವ್ ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ ಇದಕ್ಕೆ ೨ ಘಂಟೆಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಬಹಳ ಗಂಭೀರವಾದ ವಿಷಯವಾದ್ದರಿಂದ ಇದು ಸರಿಯಾಗಿ ಚರ್ಚೆಯಾಗಬೇಕಾಗಿರುತ್ತದೆ. ಏತಕ್ಕೆಂದರೆ ಈಗಾಗಲೇ ಹುಬ್ಬಳ್ಳಿಯಲ್ಲಿ ಹಲ್ಲೆ ನಡೆದಿರುತ್ತದೆ.

SRI S, S. ARAKERI.—Since it is a vital issue, we shall discuss it in the form of a full dressed debate.

MR. SPEAKER.—We shall take it up on 13th March 1981.

(INTERRUPTIONS)

MR. SPEAKER.—Please hear me. Do not say all those things. Otherwise, I will stick to rules. It is only on your request that I have agreed to take up the matter for 2½ hour discussion on 13th March 1981.

SRI A. LAKSHMISAGAR.—Sir, my submission is that the young-men are on hunger strike...

MR. SPEAKER.—Then, why should we accept this suggestion. I am really sorry. You say, for discussion considerable time will have to be given...

SRI H. GANGADHARAN.—Sir we will, take it up tomorrow.

SRI K. H. SRINIVAS—Sir, if it is necessary, a fullfledged debate has to be held. That is a separate matter, Suppose, at the end of the discussion if the Hon. Health Minister were to offer something which will alleviate the situation, why should we block it?

ಶ್ರೀ ಮಳ್ಳೂರು ಆನಂದರಾವ್.—ಮನವಿ ಕಾಲಿಂಗ್ ಅಟೆಂಷನ್ ರೀತಿಯಲ್ಲಿ ಬಂದಿದೆ. ಅದರ ಬಗ್ಗೆ ಚರ್ಚೆ ಮಾಡಲು ಸಮಯ ಕೊಡಿ ಎಂದು ನಾನೂ ಕೂಡ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಅವರು ಉಪವಾಸ ಕುಳಿತುಕೊಂಡಿರುತ್ತಾರೆ. ಅದನ್ನು ನಿಲ್ಲಿಸಬೇಕು ಎನ್ನುವ ಬಗ್ಗೆ ಮಾತನಾಡಬೇಕು. ಸುಮ್ಮನೆ ಗಂಟೆಗಟ್ಟಲೆ ಮಾತನಾಡಿದರೆ ಉಪವಾಸವನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಮಾತನಾಡತಕ್ಕಂಥ ಅಭಿಪ್ರಾಯ ಅದನ್ನು ನಿಲ್ಲಿಸತಕ್ಕಂಥ ರೀತಿಯಲ್ಲಿ ಇದಕ್ಕೆ ಮಾತನಾಡಿ.

ಶ್ರೀ ಜೆ. ಎಚ್. ಪಟೇಲ್,—ಇದು ಬಹಳ ಸ್ವಾಗತಾರ್ಹವಾದ ವಿಚಾರ. ಈ ರೀತಿಯಲ್ಲಿ ಸಮಯ ತೆಗೆದುಕೊಂಡು ಬಗೆಹರಿಸುವುದಕ್ಕಾಗುವುದಿಲ್ಲ. ಒಂದೇ ಒಂದು ವಿಷಯ ನಮ್ಮ ಮನಸ್ಸಿಗೆ ಗೊತ್ತಾಗತಕ್ಕಂಥದ್ದು ಏನೆಂದರೆ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳು ಈಗ ಏನು ಉಪವಾಸ ಮಾಡುತ್ತಿದ್ದಾರೆ, ಆ ವಿದ್ಯಾರ್ಥಿಗಳನ್ನು ಕೊನೆಪಕ್ಷ ಮಾನ್ಯ ಸಚಿವರು ಹೋಗಿ ಬೇಟಿಮಾಡಿ ಉಪವಾಸವನ್ನು ನಿಲ್ಲಿಸಬೇಕು ಎನ್ನುವ ಒಂದು ಮಾತನ್ನು ಅವರು ಕೇಳಿಕೊಳ್ಳಲಿ. ಶ್ರೀಮಾನ್ ಅರ್ಮುಗಮ್‌ರವರು ಹೇಳಿದ ಹಾಗೆ ೧೩ನೇ ತಾರೀಖು ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಲಿ. ಈಗ ಮಾನ್ಯ ಆರೋಗ್ಯ ಸಚಿವರ ವಿದ್ಯಾರ್ಥಿಗಳ ಬಳಿಗೆ ಹೋಗಿ ಈ ವಿಚಾರವನ್ನು ೧೩ನೇ ತಾರೀಖು ಚರ್ಚೆ ಮಾಡುತ್ತೇವೆಂದು ಹೇಳಿಕೊಳ್ಳಲಿ ಎಂದು ಹೇಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ ೧೩ನೇ ತಾರೀಖು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡವೆಂಬುದಾಗಿ ಹೇಳುತ್ತೇನೆ. ಏತಕ್ಕೆಂದರೆ ಅಂದು ಕನ್ನಡ ಸಾಹಿತ್ಯ ಸಮ್ಮೇಳನ ಚಿಕ್ಕಮಗಳೂರಿನಲ್ಲಿ ಇರುತ್ತದೆ. ಮುಖ್ಯಮಂತ್ರಿಗಳೂ ಕೂಡ ಅಲ್ಲಿಗೆ ಹೋಗುವವರಿದ್ದಾರೆ ಮತ್ತು ಅಖಿಲಭಾರತದ ನಮ್ಮ ಪಕ್ಷದ ಅಧ್ಯಕ್ಷರು ಕರ್ನಾಟಕ ಪ್ರವಾಸ ೧೩ ರಿಂದ ೧೫ರವರೆಗೆ ಮಾಡುವವರಿದ್ದಾರೆ ನಾವು ಅದರಲ್ಲಿ ಭಾಗವಹಿಸಬೇಕಾಗಿರುವುದರಿಂದ ಆ ಸಂದರ್ಭದಲ್ಲಿ ನಾವು ಇಲ್ಲಿ ಭಾಗವಹಿಸಲು ಸಾಧ್ಯವಾಗುವುಧಿಲ್ಲ.

ಅಧ್ಯಕ್ಷರು.—ನಾನು ಹೇಗೆ ಬಾವಿಸಲಿ ? ಹಾಗಾದರೆ ಅವರು ಉಪವಾಸ ಕುಳಿತಿರುವುದು ಪ್ರಮುಖವಾದ ವಿಷಯವಲ್ಲವೆಂದು ಹೇಳುತ್ತೀರಾ. ಅದಕ್ಕಾಗಿಯೇ ನಾನು ಹೇಳುವುದು ರೂಲ್ ನಂಬರ್ ೭೩ಕ್ಕೆ ಸೀಮಿತಗೊಳಿಸಿ ಪ್ರಸ್ತಾಪ ಮಾಡಿ ಸರ್ಕಾರದ ಮುಖಾಂತರ ಉಪವಾಸವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದರೆ ಸಹಾಯವಾಗುತ್ತದೆಂದು ಇನ್ನೊಂದು ದಿವಸ ತೀರ್ಮಾನ ಮಾಡಬಹುದಿತ್ತು ಈಗ ಅವರ ಉಪವಾಸ ಮುಂದುವರಿಸಬೇಕೆ ಅಥವಾ ನಿಲ್ಲಿಸಬೇಕೆ ಎನ್ನುವುದು ನನಗೊಂದೂ ಅರ್ಥವಾಗುತ್ತಿಲ್ಲ.

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ, ಬೆಂಗಳೂರು. Bangalore.

SRI S. R. BOMMAI. - Mr. Speaker Sir, this matter was discussed at length in the House. It is a very complicated and sensitive issue. People have got divergent views about it. In view of the discussion that took place in the House, the hon. Chief Minister has promised that the Committee appointed by the Government will be broad based a representative of the All India Medical Council will also be there, etc. Not only that, the hon. Chief Minister further stated that until the report is submitted by such a Committee, permission will not be granted to any new College. These points are categorically stated by the Government. Now, from the statement, it seems that the representative of the Indian Medical Council is yet to be named I would like to know from the Government, are they still suggesting a particular name? I would also like to know, whether any instructions have been given regarding the admissions to the new Colleges. I want clarification from the Government on these points. When we discussed with the representatives of the student, they said that the assurance given by the Chief Minister is not being implemented, and therefore, they are continuing the agitation. If the assurance given by the hon. Chief Minister is fully implemented, there is likelihood of ending this strike. Let us not again open this subject so that there will be divergent views, unnecessary controversy and more tension will be created. ತಾವು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೀರಿ. ತಾವು ಎಷ್ಟೋ ಸಂಪುಗಳನ್ನು ನಿಲ್ಲಿಸಿದ್ದೀರಿ. ತಾವು ಕಾರ್ಮಿಕ ನಾಯಕರುಗಳ ಜೊತೆಯಲ್ಲಿ ಕುಳಿತು ಮಾತನಾಡಿದಿರಿ. ಆದರೆ ಆ ಸಂಪು ಇನ್ನೂ ನಿಂತಿಲ್ಲ. ತಾವು ಈ ವಿದ್ಯಾರ್ಥಿ ಮುಖಂಡರ ಜೊತೆ ಕುಳಿತು ಮಾತನಾಡಿದ್ದೀರಿ. ಆದೂ ನಿಂತಿಲ್ಲ ತಾವು ಕೊಟ್ಟ ಆಶ್ವಾಸನೆಗಳನ್ನು ಅಚರಣೆಗೇತರತಕ್ಕ ಬಗ್ಗೆ ಎಳ್ಳಷ್ಟೂ ನಮಗೆ ಸಂಶಯ ಇಲ್ಲ. ಈಗ ವಿದ್ಯಾರ್ಥಿಗಳಿಗೆ ತಪ್ಪು ತಿಳುವಳಿಕೆ ಯಾಗಿದೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ, ನೀವು ಈ ವಿದ್ಯಾರ್ಥಿ ನಾಯಕರ ಜೊತೆ ಮಾತನಾಡಲು ಹೋಗುವಾಗ ವಿರೋಧ ಪಕ್ಷದ ಸದಸ್ಯರನ್ನೂ ಜೊತೆಗೆ ಕರೆದುಕೊಂಡು ಹೋಗಿ. ಆ ರೀತಿ ಮಾಡಿದರೆ ಇದು ಅಲ್ಲಿಗೇ ಮುಗಿದುಹೋಗುತ್ತದೆ. ಇಲ್ಲಿ ನೀವು ಕೊಟ್ಟ ಆಶ್ವಾಸನೆಯನ್ನು ಈಡೇರಿಸುವುದು ಬಹಳ ಮುಖ್ಯ ಇದೆ, ಇದರ ಬಗ್ಗೆ ಸುದೀರ್ಘ ಚರ್ಚೆಯಾದರೆ ವಾತಾವರಣದಲ್ಲಿ ಕುಸಿತ ಉಂಟಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ಈ ಒಂದು ಸತ್ಯಾಗ್ರಹ ಕಳೆದ ಎರಡು ದಿನಗಳಿಂದ ನಡೆಯುತ್ತಿದೆ. ಈಗ ಅಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿರುವ ಒಬ್ಬ ಹೆಣ್ಣು ಮಗಳ ಸ್ಥಿತಿ ಚಿಂತಾಜನಕವಾಗಿವೆ. ಮಾನ್ಯ ಆರೋಗ್ಯ ಮಂತ್ರಿಗಳು ಈ ವಿದ್ಯಾರ್ಥಿ ಮುಖಂಡರನ್ನು ಈ ದಿನ ಸಂಜೆ ೪ ಗಂಟೆಗೆ ಕರೆಸಿ ಮಾತನಾಡಲಿ. ಸಂಬಂಧಪಟ್ಟ ಶಾಸಕರನ್ನು ಕರೆಸಿ ಅವರು ಮಾತನಾಡಲಿ. ಸತ್ಯಾಗ್ರಹವನ್ನು ನಿಲ್ಲಿಸಿದ ಮೇಲೆ ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ.

SRI K. H. SRINIVASA.—Sir, last time when this matter came up before the House, we ended up with a note that we have found a way out. But, before a couple of days back, we came to know that 3 persons have taken to an indefinite fast and in fact, I was one of those who wondered how is it that the governmental action has failed to carry conviction with these representatives. But, now, after going through the Statement of the hon. Minister, I am inclined to think

that the striking students and junoir doctor may not be totally wrong in not being able to have confidence in the Governmental action. Therefore, as my learned friend Sri Bommai just now mentioned a couple of points are clarified by the Government, then we will be in a position to tell the striking students that they cannot drive the thing beyond point. In fact, this morning only when I discussed with them, I said that they cannot expect us to behave in the same manner, when the Government comes forward with certain positive proposal. They will have to wait and see, what the Government is going to do. The representatives of the Indian Medical Council, the IMC has not been able to send the representative since as the information that is fed to us is the Government was keen on getting some particular person as the nominee of the IMC. I want to know from the Government, whether they still insist on a particular representative to be on the Indian Medieal Council.

SRI R. GUNDU RAO.—It is not so.

SRI K. H. SRINIVASA.—Secondly, the students told us, of course this will have to be viewed little sympathetically. They say that none of their representative is there and the reason the Government has given is, there is no agreement regarding their representation. There is no one agreed representative. But, the students say that it is not the fact. Sir, afterall they are a party and their being on a Committee is only to be assured that the Committee functions dispassionately and infuse in them the confidence. Therefore, I do not think that it will be improper, if the government were to generously come forward to include one of their representatives to be on the Committee.

ಶ್ರೀ ವಂಳ್ಳೂರು ಆನಂದ ರಾವ್.—ಪಾಯಿಂಟ್ ಆರ್ಡರ್ ಸ್ವಾಮಿ. ಈ ವಿಷಯದ ಬಗ್ಗೆ ಮಾನ್ಯ ಶ್ರೀನಿವಾಸ್ ಅವರು ಚರ್ಚೆ ಮಾಡುತ್ತಿದ್ದಾರೆ. ನಾನು ಇನ್ನೂ ನನ್ನ ಚರ್ಚೆಯನ್ನು ಮುಗಿಸೇ ಇಲ್ಲ. ಆಗಲೇ ಅವರು ಚರ್ಚೆಗೆ ಪ್ರಾರಂಭ ಮಾಡಿದ್ದಾರೆ. ಮಾನ್ಯ ಆರ್ಮುಗಂ ಹಾಗೂ ಬೊಮ್ಮಾಯಿಯವರು ಸಲಹೆ ಕೊಟ್ಟರು. ಆಗ ನಾನು ಕುಳಿತುಕೊಂಡೆ. ಆದರೆ ನಾನು ಇನ್ನೂ ಚರ್ಚೆ ಮುಗಿಸಿಲ್ಲಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಿಮ್ಮ ಚರ್ಚೆ ಮುಗಿದಮೇಲೆಯೇ ಅಧ್ಯಕ್ಷರು ನನಗೆ ಮಾತ ನಾಡಲು ಅವಕಾಶ ಕೊಟ್ಟರು. ನಾನು ಮಾತನಾಡುತ್ತಿದ್ದೇನೆ.

ಮಾನ್ಯ ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್ ಅವರು ಕ್ಲಾರಿಫಿಕೇಷನ್ಸ್ ಕೇಳುತ್ತಿದ್ದಾರೆ.

ಶ್ರೀ ವಂಳ್ಳೂರ್ ಆನಂದರಾವ್.—ಇದು ಸಲಹೆಗೇ ಮುಕ್ತಾಯವಾದರೆ ಸರಿ.

MR. SPEAKER —He is also a signatory. The hon. Member Sri K. H. Srinivasa is just asking some clarifications from the Minister and making some suggestions, He is not making a big lengthy speech

SRI K. H. SRINIVASA.—Sir, the apprehension in the mind of the striking students is, this Committee business is being dodged for one reason or the other, beyond their control. Another thing is in the

meanwhile, the Government will go ahead with the new colleges. This is the apprehension. One of the colleges has already selected the candidates. Instructions have been issued to withhold further action But, inspite of it, the selection is going on. Certainly, this will create some apprehension in the minds of the students.

ಶ್ರೀ ಎಚ್. ಡಿ. ದೇವೇಗೌಡ.—ಈ ಒಂದು ಗಮನ ಸೆಳೆಯುವ ಸೂಚನೆಯನ್ನು ತಂದಿರುವ ಶ್ರೀ ಲಕ್ಷೀಸಾಗರ್, ಶ್ರೀ ರಾಮ್‌ದೇವ್ ಹಾಗೂ ಶ್ರೀ ಜೀವರಾಜ ಆಳ್ವ ಅವರಿಗೆ ೨ ಮೆಡಿಕಲ್ ಕಾಲೇಜುಗಳ ಸ್ಥಾಪನೆ ಬಗ್ಗೆ ವಿರೋಧ ಇಲ್ಲ. ಯಾರು ಉಪವಾಸ ಮಾಡುತ್ತಿದ್ದಾರೆ, ಯಾರು ಸ್ಟ್ರೈಕ್ ಮಾಡುತ್ತಿದ್ದಾರೆ ಅವರ ಬೇಡಿಕೆಗಳ ಬಗ್ಗೆ ಅವರಿಗೆ ವಿರೋಧ ಇಲ್ಲ. ಕ್ಯಾಪಿಟೇಷನ್ ಫೀ ರದ್ದು ಮಾಡಬೇಕೆಂದು ಅವರು ಸ್ಪೆಸಿಫಿಕ್ಕಾಗಿ ಹೇಳುತ್ತಿದ್ದಾರೆ. ಆದರೆ ಈ ಸ್ಟೇಟ್‌ಮೆಂಟ್ ಓದಿದ ಮೇಲೆ ಅವರ ಪ್ರವೇಶದ ಬಗ್ಗೆ ಸಂಶಯ ಬಂದಿದೆಯೆಂದು ಹೇಳುತ್ತಿದ್ದಂತೆ ಕಾಣುತ್ತಿದೆ. ಅದರ ಬಗ್ಗೆ ತಾವು ಸ್ವಲ್ಪ ವಿವರಣೆ ಕೊಡುತ್ತೀರಾ?

SRI K. H. SRINIVAS.—I am only concerned with what the Government said and what was conveyed to us and to the students. It was conveyed that there will be no further proceedings till this Committee makes its recommendations. If that is not the case, I stand corrected So far as the boys case is concerned, if there were to be full fledged discussions I may come out with my own information. I am not here to comment on the merits and de-merits of their demands. So far as the affiliation business is concerned, because the Government thought it fit to take over powers, this has worked adverse in their minds. These are certain apprehensions. I am not able to say that their apprehensions are totally wrong though you have no business to be unnecessarily apprehensive, If the Government were to clarify some two or three points, it may help us to insist the students. We can go to them and tell that we have impressed on the Government this way and if necessary we will further taken it up. We can make an appeal to the students if the Government satisfy us on these points.

ಶ್ರೀ ಹೆಚ್. ಎಲ್. ತಿಮ್ಮೇಗೌಡ. —ಸ್ವಾಮಿ, ಅಧ್ಯಕ್ಷರೇ, ಕಳೆದ ಬಾರಿ ಇವರ ಬಗ್ಗೆ ಚರ್ಚೆಯಾದಾಗ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಎಂದರೆ ಈ ಕಮಿಟಿಯವರು ರಿಪೋರ್ಟ್ ಕೊಡುವವರೆಗೆ ನಾವು ಯಾವ ಹೊಸ ಕಾಲೇಜನ್ನೂ ಕೂಡ ಹೊಸದಾಗಿ ತೆಗೆಯುವುದಕ್ಕೆ ಯೋಚನೆ ಮಾಡು ಮಾಡುವುದಿಲ್ಲ ಎಂದು ಹೇಳಿದರು. ಆದರೆ ಆ ಕಾಲೇಜುಗಳಿಗೆ ಪ್ರವೇಶದ ಬಗ್ಗೆ ಮುಖ್ಯಮಂತ್ರಿಗಳು ಯಾವ ಆಶ್ವಾಸನೆ ಯನ್ನು ಕೂಡ ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಆಗಲಿ ಸರ್ಕಾರವೇ ಆಗಲಿ ಈ ಕಾಲೇಜುಗಳಿಗೆ ಆಗುತ್ತಿರುವ ಪ್ರವೇಶದ ಬಗ್ಗೆ ಯಾವರೀತಿ ಆಶ್ವಾಸನೆಯನ್ನೂ ಕೂಡ ಕೊಟ್ಟಿಲ್ಲ. ಹೊಸ ಮೆಡಿಕಲ್ ಕಾಲೇಜುಗಳಿಗೆ ಸ್ಯಾಂಕ್ಷನ್ ಕೊಡುವುದನ್ನು ಆ ಕಮಿಟಿ ರಿಪೋರ್ಟ್ ಬರುವವರೆಗೆ ನಿಲ್ಲಿಸುತ್ತೇವೆಂದು ಹೇಳಿದರೇ ವಿನಾ ಮತ್ತೇನೂ ಹೇಳಿಲ್ಲಾ ಈ ವಿಚಾರದಲ್ಲಿ ಕಮಿಟಿಯವರು ಪತ್ರ ಬರೆದಿರುವುದರ ವಿಚಾರವಾಗಿಯಾಗಲ್ಲಿ ಅಥವಾ ಅಡ್ಮಿಷನ್ ವಿಚಾರದಲ್ಲಿಯಾಗಲಿ ನಾವು ಕೇಳತಕ್ಕರದ್ದು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಈಗ ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳ ಬಗ್ಗೆ ಉಪವಾಸ ಸತ್ಯಾಗ್ರಹ ಕೂತಿರುವವರ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರು ಹೇಳಿದ್ದಾರೆ. ಖಾಸಗಿ ಕಾಲೇಜಿನವರು ೭೫ ಸಾವಿರ ಒಂದು ಲಕ್ಷ ಹೇಗೆ ಸಂಗ್ರಹ ಮಾಡಿ ಸುಲಿಗೆ ಏನು ಮಾಡುತ್ತಿದ್ದಾರೆ ಅದಕ್ಕೆ ಅವಕಾಶ ಕೊಡಬಾರದು, ಇದನ್ನು ತಡೆಗಟ್ಟಬೇಕು ಅನ್ನುವ ಉದ್ದೇಶದಿಂದ ಅವರು ಉಪವಾಸ

ಸತ್ಯಾಗ್ರಹ ಮಾಡುತ್ತಿದ್ದಾರೆ. ಆದರೆ ಈಗ ನೀವು ಬ್ಲಾಕ್ ಮಾರ್ಕೆಟೀರ್ ಅನ್ನು ಕಳ್ಳದಾಸ್ತಾನುಗಾರರನ್ನು ಮುಟ್ಟುಗೋಲು ಹಾಕುವುದಕ್ಕೆ ಸರ್ಕಾರದವರು ಏನು ಪ್ರಯತ್ನ ಮಾಡುತ್ತಿದ್ದಾರೋ ಅದೇ ರೀತಿ ಈ ಖಾಸಗೀ ವಿದ್ಯಾ ಸಂಸ್ಥೆಗಳ ಮೇಲೆ ಈ ಹಣ ಸುಲಿಗೆ ಮಾಡುವವರ ಮೇಲೆ ಏತಕ್ಕೆ ಆ ಕಾರ್ಯಕ್ರಮ ಕೈಗೊಳ್ಳಬಾರದು ಎನ್ನುವುದೇ ಅವರ ಮುಖ್ಯ ಉದ್ದೇಶ. ಅವರು ೩ ದಿನದಿಂದಲೂ ಸತ್ಯಾಗ್ರಹ ಮಾಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಈಗ ಈ ಬಗ್ಗೆ ಗಮನ ಹರಿಸದೇ ಹೋದರೆ ಮುಂದೆ ಇದು ಬೇರೆ ಬೇರೆ ಕಡೆಯೂ ಪ್ರಾರಂಭವಾಗುತ್ತದೆ. ಈಗಾಗಲೇ ದಾವಣಗೆರೆ ವಿದ್ಯಾರ್ಥಿಗಳು ಉಪವಾಸ ಮಾಡುವುದಕ್ಕೆ ಶುರು ಮಾಡಿದ್ದಾರೆ. ಇದು ರಾಜ್ಯಾದ್ಯಂತ ಶುರುವಾಗುತ್ತದೆ ಆದುದರಿಂದ ಈ ಬಗ್ಗೆ ಈಗಲೇ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಹೊರಟಿದ್ದಾರೆ. ಮುಂದು ಇದು ಮುಂದುವರೆಯಬಾರದು ಅನ್ನುವ ಉದ್ದೇಶದಿಂದ ಮಾಡಿದ್ದಾರೆ. ಈ ವೈದ್ಯಕೀಯ ವಿದ್ಯಾರ್ಥಿಗಳಿಗೆ ನಮ್ಮ ರಾಜ್ಯದಲ್ಲಿರತಕ್ಕಂಥಾ ಎಲ್ಲ ಬುದ್ಧಿಜೀವಿಗಳ ಬೆಂಬಲವೂ ಇದೆ. ಈವೊತ್ತಿನ ದಿವಸ ಈ ವಿದ್ಯಾರ್ಥಿಗಳು ಕೈಗೊಂಡ ಕ್ರಮ ನ್ಯಾಯವಾಗಿದೆ. ಈ ಖಾಸಗೀ ವಿದ್ಯಾ ಸಂಸ್ಥೆಗಳಲ್ಲಿ ಹಣ ವಸೂಲ್ಮಾಡತಕ್ಕಂಥಾ ಇರತಕ್ಕಂಥಾ ವ್ಯವಹಾರವನ್ನು ಈಗ ತಡೆಗಟ್ಟದೇ ಹೋದರೆ ಈ ವಿದ್ಯೆ ಬಗ್ಗೆ ಮುಂದೆ ಒಳ್ಳೆಯ ವಿದ್ಯವೂ ಸಿಕ್ಕುವುದಕ್ಕೆ ಸಾಧ್ಯವಿಲ್ಲ: ಮುಂದೆ ಸಾಮಾನ್ಯ ಜನರಿಗಂತೂ ಅವಕಾಶ ಇರುವುದಿಲ್ಲ. ಆದುದರಿಂದ ಈವೊತ್ತು ವೈದ್ಯಕೀಯ ವಿದ್ಯಾರ್ಥಿಗಳು ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಅದನ್ನು ಕೊನೆಗಾಣಿಸುವುದಕ್ಕೆ ಎಲ್ಲ ರೀತಿಯ ಪ್ರಯತ್ನಗಳನ್ನೂ ಕೂಡ ಮಾನ್ಯ ಆರೋಗ್ಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ

SRI A. LAKSHMISAGAR (Chickpet).—Sir, at the end of the discussion last time, I got an impression from the Chief Minister's reply that the Government will not do anything in granting affiliation to new colleges. This is what he said as was pointed out by Dr. Thimmegowda. Sir, the trouble starts when the Committee is directing the two medical colleges not to go a head with admissions till affiliation is granted. After a prolonged discussion on the floor of this House, if I may recall, this is my impression and the purport of the Hon'ble Chief Minister's statement that the Government will not do anything in granting affiliation to new colleges. Now the Hon'ble Minister for Health says that the Committee of which, he is the Chairman addressed letters to the two colleges mentioned in the statement not to go ahead with admissions. As it has appeared in the press, a particular college has announced its intention to receive applications for admissions. This is the dichotomy that persists and there are apprehensions in the minds of the students that the Government's stand is not clear. For some reason or the other, the Committeee that was to go into the matter has not come out with the report and its decision is postponed for reasons good or bad. But the totality of the fact is that the decision has not come. These two situations or factors have created, particularly in the minds of the striking students, grave apprehension about the bonafides of the Government on this question. As was pointed by Sri Mallur Ananda Rao: their demands are non-exceptional. This is the dichotomy that exists and it should be cleared and it is cleared and if it is satisfactory to us, we will also joint you

in making an appeal to the students to call off their hunger strike. This is my submission.

ಶ್ರೀ ಬಿ. ವಿ. ಕಕ್ಕಿಲಾಯ.—ಈವೊತ್ತು ಬೆಳಿಗ್ಗೆ ಅನ್ನ ಸತ್ಯಾಗ್ರಹ ಮಾಡತಕ್ಕಂಥಾ ೩ ವಿದ್ಯಾರ್ಥಿಗಳನ್ನು ನಾನು ನೋಡಿಕೊಂಡು ಬಂದಿದ್ದೇನೆ. ಅದರಲ್ಲಿ ಒಬ್ಬರು ಮಹಿಳೆಯರು ಇನ್ನು ಇಬ್ಬರು ವಿದ್ಯಾರ್ಥಿಗಳು ಇದ್ದಾರೆ. ಈವೊತ್ತು ೮ನೇ ದಿನವಾಗಿದೆ. ಅವರ ಆರೋಗ್ಯ ಸ್ಥಿತಿ ಅಷ್ಟು ಚೆನ್ನಾಗಿಲ್ಲ. ಆದುದರಿಂದ ಆದಷ್ಟು ಬೇಗ ಇದನ್ನು ಮುಕ್ತಾಯಗೊಳಿಸುವ ಜವಾಬ್ದಾರಿ ತಮಗೆ ಇದೆ, ನಮ್ಮಿಂದಲೂ ಸಹ ಈ ಬಗ್ಗೆ ಏನಾದರೂ ಸಹಾಯ ಮಾಡುವುದು ಇದ್ದರೆ ಸಹಾಯ ಮಾಡುವುದಕ್ಕೆ ತಯಾರಿದ್ದೇವೆ. ಈ ಅನ್ನ ಸತ್ಯಾಗ್ರಹದ ಹಿನ್ನೆಲೆ ಏನು ಅನ್ನುವುದು ತಮ್ಮ ಹೇಳಿಕೆಯಲ್ಲಿ ಸ್ಪಷ್ಟವಾಗಿಲ್ಲ. ಈ ಮೊದಲು ಮಾತನಾಡಿದವರು ಅನೇಕ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಏನು ಆಶ್ವಾಸನೆ ಕೊಟ್ಟಿದ್ದರೋ ಅದನ್ನು ಈಡೇರಿಸಲಿಲ್ಲಾ ಎಂದು ಹೇಳಿದರು. ಅದಕ್ಕೋಸ್ಕರ ಅವರಿಗೆ ಈವೊತ್ತು ಭಯವಾಗಿದೆ. ಅದನ್ನು ತಾವು ಬಗೆಹರಿಸಬೇಕು. ಮಾನ್ಯ ಮಳ್ಳೂರು ಆನಂದರಾಯರು ಹೇಳಿದ ಹಾಗೆ ಇದನ್ನು ಬಗೆಹರಿಸಬೇಕಾದರೆ ಆ ವಿದ್ಯಾರ್ಥಿಗಳ ನಾಯಕರನ್ನೂ ಕರೆಸಿ ಅಥವಾ ಅಲ್ಲಾದರೂ ಹೋಗಿ ಈ ಕ್ಯಾಪಿಟೇಷನ್ ಫೀಸ್ ಬಗ್ಗೆ ಏನು ಹೇಳಿದ್ದಾರೋ ಅದನ್ನು ಬಗೆಹರಿಸಿ ಅವರು ಇಟ್ಟಿರುವ ಹೇಳಿಕೆ ಏನೆಂದರೆ ಕ್ಯಾಪಿಟೇಷನ್ ಫೀಸ್ ಈ ರೀತಿ ಇಟ್ಟರೆ ಇದು ವರ್ಷ ವರ್ಷಕ್ಕೂ ಜಾಸ್ತಿಯಾಗುತ್ತದೇ ವಿನಾ ಕಡಿಮೆಯಾಗುವುದಿಲ್ಲ, ಅಲ್ಲದೇ ಇವರು ಹಾಕಿರತಕ್ಕಂಥಾ ಕ್ಯಾಪಿಟೇಷನ್ ಫೀಸ್ ಹದ್ದುಮೀರಿ ಹೋಗಿದೆ ಎಂದು ಹೇಳಿದ್ದಾರೆ. ಹೋದಸಲವೂ ಕೂಡ ಈ ಬಗ್ಗೆ ಚರ್ಚೆ ಮಾಡಿದಾಗ ಚರ್ಚೆ ಮಾಡುವ ಕಾಲದಲ್ಲಿ ಇನ್ನು ಮುಂದೆ ಯಾವ ಕಾಲೇಜಿಗೂ ಕೂಡ ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದಿರಿ. ಆಮೇಲೆ ಈ ಶಾಸನ ಸಭೆ ಮುಗಿದ ಮೇಲೆ ೧೦೦ಕ್ಕೆ ೧೦೦ರಷ್ಟು ಸೀಟುಗಳನ್ನು ಜಾಸ್ತಿ ಮಾಡಿಬಿಟ್ಟು ಅವರಿಂದ ಕ್ಯಾಪಿಟೇಷನ್ ಫೀಸ್ ತೆಗೆದುಕೊಂಡು ಆ ಸೀಟುಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಕೊಟ್ಟಿರಿ. ಈಗ ಸ್ವಲ್ಪ ದಿವಸದ ಹಿಂದೆ ಒಂದು ಕಾಲೇಜಿನವರು ಕ್ಯಾಪಿಟೇಷನ್ ಫೀಸ್ ಅನ್ನು ವಸೂಲು ಮಾಡುವುದಿಲ್ಲ ಎಂದು ಹೇಳಿದರು. ಅದಕ್ಕೆ ಎಲ್ಲರೂ ಕೂಡ ಅಭಿನಂದನೆಯನ್ನು ಸಲ್ಲಿಸಿದರು. ಆದರೆ ಅವರು ವಸೂಲ್ಮಾಡಬೇಕೆಂದರೆ ಕಾಲೇಜಿಗೆ ಕ್ಯಾಪಿಟೇಷನ್ ಕೊಡುವುದರ ಬದಲು ಅವರದ್ದೇ ಆದ ಒಂದು ಚಾರಿಟಬಲ್ ಟ್ರಸ್ಟ್ ಇದೆ ಅದಕ್ಕೆ ಅಂತ ತೆಗೆದುಕೊಳ್ಳುತ್ತಾರೆ. ಇದು ಯಾವ ರೀತಿ ನ್ಯಾಯ ಹೇಳಿ. ಆ ಚಾರಿಟಬಲ್ ಟ್ರಸ್ಟ್‌ಗೆ ಅವರು ಎಷ್ಟು ಬೇಕಾದರೂ ತೆಗೆದುಕೊಳ್ಳಬಹುದು. ಅದಕ್ಕೇನೂ ಸರಿಯಾದ ಲೆಕ್ಕ ಇಲ್ಲ. ಕಾಲೇಜಿಗೆ ತೆಗೆದುಕೊಂಡರೆ ನಿಮಗೆ ಲೆಕ್ಕ ಕೊಡಬೇಕಾಗುತ್ತದೆ. ಈ ರೀತಿಯಾಗಿ ಅವರು ಸುಲಿಗೆ ಮಾಡುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಾಗಲಿ, ನಮಗಾಗಲಿ ಬಹಳ ತೊಂದರೆ. ಕ್ಯಾಪಿಟೇಷನ್ ಫೀಸ್ ವಸೂಲ್ಮಾಡುವುದಕ್ಕೆ ಈ ಖಾಸಗೀ ವೈದ್ಯಕೀಯ ಸಂಸ್ಥೆಗಳು ಈ ರೀತಿಯಾಗಿ ಸುಲಿಗೆ ಮಾಡುತ್ತಿರುವುದರಿಂದ ಈ ವಿದ್ಯಾರ್ಥಿಗಳಿಗೆ ಈವೊತ್ತು ಭಯವಾಗಿದೆ ಈ ಭಯದ ಬಗ್ಗೆ ತಾವು ತಮ್ಮ ಧೋರಣೆ ಏನಿದೆ ಅನ್ನುವುದನ್ನು ಸ್ಪಷ್ಟಪಡಿಸಬೇಕು. ಹಾಗೆ ತಾವು ಸ್ಪಷ್ಟಪಡಿಸದೇ ಹೋದರೆ ಬಹಳ ಕಷ್ಟ. ಅದಕ್ಕೆ ಅವಕಾಶ ಕೊಡಬಾರದು ಎನ್ನುವುದು ನನ್ನ ಅಭಿಪ್ರಾಯ.

೩.೩೦ ಪಿ.ಎಂ

ಈಗ ಹೊಸ ಮೆಡಿಕಲ್ ಕಾಲೇಜುಗಳ ಸಂಬಂಧದಲ್ಲಿ ಒಂದು ಸಮಿತಿ ಏನಿದೆ ಅದು ಇದನ್ನು ಕೂಲಂಕಷವಾಗಿ ಚರ್ಚೆ ಮಾಡಿ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ತನಕ ಹೊಸ ಮೆಡಿಕಲ್ ಕಾಲೇಜುಗಳಿಗೆ ಅಫಿಲಿಯೇಷನ್ ಕೊಡುವುದಿಲ್ಲ ಎನ್ನತಕ್ಕಂಥ ಭರವಸೆಯನ್ನು ಈ ಸಭೆಗೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ನೀವು ಯೂನಿವರ್ಸಿಟಿ ಆರ್ಡಿನೆನ್ಸ್ ತಂದು ಯೂನಿವರ್ಸಿಟಿ ಪರವಾನಗಿ ಇಲ್ಲದೇ ಈ ಕಾಲೇಜುಗಳಿಗೆ ಅಫಿಲಿಯೇಷನ್ ಕೊಡಬಹುದು ಎಂದು ಏನು ಹೇಳಿದ್ದೀರಿ ಇದರಿಂದ ಅವರಿಗೆ ಅನುಮಾನ ಜಾಸ್ತಿಯಾಗುತ್ತಿದೆ. ಈ ಒಂದು ಅನುಮಾನವನ್ನು ಹೋಗಲಾಡಿಸುವಂಥ ರೀತಿಯಲ್ಲಿ ನೀವು ಅವರಿಗೆ ಈ ಬಗ್ಗೆ ಒಂದು ಭರವಸೆಯನ್ನು ಕೊಡಬೇಕು. ಇದರ ಬಗ್ಗೆ ಕಮಿಟಿಯ ತೀರ್ಮಾನ ಆಗುವವರೆಗೆ ಯಾವುದೇ ಹೊಸ ಮೆಡಿಕಲ್ ಕಾಲೇಜುಗಳಿಗೆ ಅವಕಾಶ ಕೊಡುವುದಿಲ್ಲವೆಂದು ಭರವಸೆ ಕೊಟ್ಟು ಈ ಒಂದು ಅನ್ನ ಸತ್ಯಾಗ್ರಹವನ್ನು ಮುಕ್ತಾಯ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಈಗ ಈ ವಿಚಾರದಲ್ಲಿ ಒಂದು ಗಮನಸೆಳೆಯುವ ಸೂಚನೆಯನ್ನು ಏನು ಕಳಿಸಿದ್ದೇವೆ ಅದಕ್ಕೆ ನಾನೂ ಒಂದು ನೋಟೀಸ್ ಕಳಿಸಿದ್ದೇನೆ. ಇವತ್ತು ಬೆಳಿಗ್ಗೆ ನಿಮ್ಮ ಕಚೇರಿಗೆ ನೋಟೀಸ್ ಕಳಿಸಿದ್ದೇನೆ. ತಮ್ಮ ಕಷ್ಟ ನನಗೆ ಗೊತ್ತಿದೆ; ಏನೆಂದರೆ ಆ ನೋಟೀಸ್‌ಗೆ ರುಜು ಮಾಡದಿದ್ದರೆ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದು ಕಷ್ಟವಾಗುತ್ತದೆ. ಈ ಸಂದರ್ಭದಲಿ ಈ ಮೆಡಿಕಲ್ ಕಾಲೇಜುಗಳ ಬಗ್ಗೆ ನಾನು ಎರಡು ವಿಚಾರಗಳನ್ನು ಹೇಳುತ್ತೇನೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಂದ ನೇರವಾಗಿ ಇದಕ್ಕೆ ಉತ್ತರವನ್ನು ಅಪೇಕ್ಷೆ ಪಡುತ್ತೇನೆ. ಈ ಬಗ್ಗೆ ನಾನು ಹೆಚ್ಚು ಚರ್ಚೆಗೆ ಹೋಗುವುದಿಲ್ಲ. ರಾಜ್ಯದಲ್ಲಿ ಎರಡು ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ನಿರ್ಣಯಕೊಟ್ಟಮೇಲೆ ಈ ಒಂದು ಮುಷ್ಕರ ರಾಜ್ಯದಲ್ಲಿ ಪ್ರಾರಂಭವಾಯಿತು. ಮಾನ್ಯ ಸಚಿವರೂ ಕೂಡ ಅದನ್ನೇ ಹೇಳಿದ್ದಾರೆ. ಮಾನ್ಯಸಚಿವರು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್ ಆಧಾರದಮೇಲೆ ನಾನು ಇವತ್ತು ಹೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಯವರು ಈ ಸದನದಲ್ಲಿ ಶ್ರೀ ಬೊಮ್ಮಾಯಿಯವರು ತಿಳಿಸಿದಂಥ ಟೆಕ್ನಿಕಲ್ ಎಕ್ಸ್‌ಪರ್ಟ್ಸನ್ನು ಸೇರಿಸಿ ಒಂದು ಕಮಿಟಿಯನ್ನು ಮಾಡತಕ್ಕಂಥಾದಕ್ಕೆ ಒಂದು ಆಶ್ವಾಸನೆಯನ್ನು ಕೊಟ್ಟರು. ಅವರು ಆಶ್ವಾಸನೆಯನ್ನು ಕೊಟ್ಟಂಥ ಮರುದಿವಸದಿಂದ ಮುಷ್ಕರ ನಿಲ್ಲಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಂಥ ಆಶ್ವಾಸನೆ ಕಾರ್ಯರೂಪಕ್ಕೆ ಬರುವುದು ತಡವಾಯಿತು ಎಂದು ಉಪವಾಸ ಮುಷ್ಕರ ನಡೆಯುತ್ತಿದೆ ಎಂದು ಕೆಲವರು ಹೇಳುತ್ತಿದ್ದಾರೆ; ಅದು ಮುಷ್ಕರ ಮುಂದುವರಿಯುವುದಕ್ಕೆ ಕಾರಣವಲ್ಲ. ಅಲ್ಲಿಂದ ಈ ಮುಷ್ಕರ ಕಂಟಿನ್ಯೂ ಆಯಿತು. ಕಳೆದ ೩ ದಿವಸಗಳಿಂದ ಹಂಗರ್ ಸ್ಟ್ರೈಕ್ ಪ್ರಾರಂಭವಾಯಿತು. ಅವರು ಕೊಟ್ಟಂಥ ಆಶ್ವಾಸನೆಯಲ್ಲಿ ವಿಶ್ವಾಸವಿಲ್ಲದೇ, ಅವರ ಹೇಳಿಕೆಗೆ ಗೌರವವಿಲ್ಲದೇ ಇವತ್ತಿನದಿವಸ ಮುಷ್ಕರ ಮುಂದುವರಿದಿದೆ. ಅವರ ಹೇಳಿಕೆ ಆ ಮೆಡಿಕಲ್ ವಿದ್ಯಾರ್ಥಿ ಗಳಿಗೆ. ಸಮಾಧಾನ ತಂದಿಲ್ಲ. ಆ ಮುಷ್ಕರದಲ್ಲಿ ತರುಣ ವೈದ್ಯರೂ ಇದ್ದಾರೆ. ಈ ಎರಡು ಮೆಡಿಕಲ್ ಕಾಲೇಜುಗಳ ಪ್ರವೇಶಕ್ಕೆ ಅವರು ವಿರುದ್ಧವಾಗಿಲ್ಲ. ಆದರೆ ಕಾಪಿಟೇಷನ್ ಫೀಜ್ ಬಗ್ಗೆ ಅವರ ವಿರೋಧ ಇದೆ. ಅಲ್ಲದೇ ಖಾಸಗೀ ಮೆಡಿಕಲ್ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಬೇಕು ಎನ್ನತಕ್ಕಂಥ ಒತ್ತಾಯವನ್ನು ಅವರು ತಂದಿದ್ದಾರೆ. ಇದು ಬಹಳ ಸಂತೋಷದ ವಿಷಯ. ರಾಜ್ಯದಲಿರತಕ್ಕಂಥ ಖಾಸಗೀ ಮೆಡಿಕಲ್ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಲಿ; ಆದರೆ ಅಂಬೇಡ್ಕರ್ ಮೆಡಿಕಲ್ ಕಾಲೇಜ್ ಮತ್ತು ಕೆಂಪೇಗೌಡ ಮೆಡಿಕಲ್ ಕಾಲೇಜ್‌ಗೆ ಪ್ರವೇಶವನ್ನು ತಡೆಹಿಡಿಯಿರಿ ಎಂದು ಏತಕ್ಕೆ ಹೇಳಿದರು? ರಾಜಕೀಯ ಇರುವುದು ಇಲ್ಲಿ. ಹುತ್ತದಲ್ಲಿ ಹಾವು ಇಟ್ಟುಕೊಂಡು ಮೇಲೆ ಬಡಿಯುವಂಥ ಪ್ರಯತ್ನ ಏತಕ್ಕೆ ಮಾಡಬೇಕು? ಅದರ ಅವಶ್ಯಕತೆ ಇಲ್ಲ. We will pass an unanimous resolution; I have no objection. Let us stop all the dsvelopmental activities and we will stand by the Government if the House wants to take a decision to nationalise all the Medical Colleges or all other Private Engineering Colleges or general educational institutions. I have no objection. ಅದನ್ನು ಬಿಟ್ಟು ಮುಂದೆ ಕಮಿಟಿಯವರು ಏನೊಂದು ನಿರ್ಣಯವನ್ನು ಕೊಡು ತ್ತಾರೋ ಅಲ್ಲಿಯವರೆಗೆ ಈ ಎರಡು ಮೆಡಿಕಲ್ ಕಾಲೇಜುಗಳ ಬಗ್ಗೆ ಪ್ರವೇಶವನ್ನು ತಡೆಹಿಡಿಯಿರಿ ಎಂದು ಹೇಳಿದರು ಏತಕ್ಕೆ? ನೀವು ಯಾವುದನ್ನೂ ನೇರವಾಗಿ ಹೇಳಬೇಕು. "I am going to withdraw the Government Order that is issued in connection with these two Calleges." Whatever may be the circumstances, let us make it clear. ಇದರ ಬಗ್ಗೆ ಒಳಗೊಂದು ಹೊರಗೊಂದು ಬೇಡ. ಇದರಲ್ಲಿ ಸಾಕಷ್ಟು ರಾಜ ಕೀಯ ಇದೆ. ಅದರ ಬಗ್ಗೆ ನಾನು ಈಗ ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ದಯ ಮಾಡಿ ನೀವು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಅದರ ಬಗ್ಗೆ ನಾನು ಇನ್ನೇನನ್ನೂ ತಮ್ಮಿಂದ ಕೇಳುವುದಕ್ಕೆ ಇಷ್ಟಪಡುವುದಿಲ್ಲ. ನೀವು ಆಶ್ವಾಸನೆಯನ್ನು ಕೊಟ್ಟರೂ ಸ್ಟ್ರೈಕ್ ನಿಲ್ಲಲಿಲ್ಲ. ನೀವು ಕೊಟ್ಟಂಥ ಆಶ್ವಾಸನೆಯನ್ನು ಕಾರ್ಯರೂಪಕ್ಕೆ ತರುವುದಲ್ಲಿ ತಡವಾಯಿತು ಎಂದು ಅವರು ಮುಷ್ಕರ ಮಾಡುತ್ತಾ ಇಲ್ಲ. ನಿಮ್ಮ ಆಶ್ವಾಸನೆಯಿಂದ ಅವರಿಗೆ ಸಮಾಧಾನ ಆಗಿಲ್ಲ. ನೀವು ನೇಮಿಸಿರತಕ್ಕಂಥ ಕಮಿಟಿ ಮುಂದೆ ಏನೇ ರಿಪೋರ್ಟ್ ಕೊಡಲಿ, ಅದು ಹೊಸ ಕಾಲೇಜುಗಳಿಗೆ ಅನ್ವಯವಾಗುವಂಥ ವಿಚಾರ. ಈ ಎರಡು ಕಾಲೇಜುಗಳ ಪ್ರವೇಶಕ್ಕೆ ಅಡ್ಡಿ ತರತಕ್ಕಂಥಾದಕ್ಕೆ ಕಾರಣ ಏನು ಎಂಬುದನ್ನು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಅದಿಲ್ಲದಿದ್ದರೆ ಈಗ ಇರತಕ್ಕಂಥ ಆರ್ಡಿನೆನ್ಸನ್ನು ವಿತ್‌ಡ್ರಾ

ಮಾಡಿಕೊಳ್ಳಿ ಎಂದು ಹೇಳುತ್ತೇನೆ. ಇದರಲ್ಲಿ ಯಾವುದೇ ರೀತಿಯ ಮುಚ್ಚುಮರೆಯ ರಾಜಕಾರಣ ಬೇಕಾಗಿಲ್ಲ. ಈ ಬಗ್ಗೆ ನಾನು ಪ್ರಾಮಾಣಿಕವಾದ ಉತ್ತರವನ್ನು ಬಯಸುತ್ತೇನೆ.

ಶ್ರೀ ಕೆ.ಬಿ. ಶಿವಯ್ಯ.—ಮಾನ್ಯ ಅಧ್ಯಕ್ಷರೇ, ಇದೊಂದು ಜಟಿಲವಾದ ಹಾಗೂ ಸೂಕ್ಷ್ಮವಾದ ಸಮಸ್ಯೆಯಾಗಿದೆ. ಈ ಸಮಸ್ಯೆಯ ವಿಚಾರ ಬಹುಷಃ ಈ ಮನೆಯಲ್ಲಿ 2-3 ಸಾರಿ ಚರ್ಚೆಗೆ ಬಂದಿದೆ. ಈ ವಿಚಾರದಲ್ಲಿ ಸರ್ಕಾರದ ಜವಾಬ್ದಾರಿ ಜಾಸ್ತಿ ಇದೆಯೆಂದು ನಾನು ತಿಳಿದುಕೊಂಡು ನಾನು ತಮ್ಮ ಮುಖಾಂತರ ಸರ್ಕಾರದವರಿಗೆ ಒಂದೆರಡು ಕ್ಲಾರಿಫಿಕೇಷನ್ಸ್ ಕೇಳುತ್ತಿದ್ದೇನೆ. ಕಳೆದ 25-30 ದಿವಸಗಳಿಂದ ಈ ಸ್ಟ್ರೈಕ್ ನಡೆದುಕೊಂಡು ಬಂದು ಈಗ ಎರಡನೆಯ ಘಟ್ಟಕ್ಕೆ ಬಂದು ಮುಟ್ಟಿದೆ. ಈಗ ಕಳೆದ 4 ದಿನಗಳಿಂದ ಅವರು ಅಮರಣಾಂತ ಉಪವಾಸ ಮಾಡುತ್ತಿದ್ದಾರೆ. ಅವರಿಗೆ ಏನಾದರೂ ಹೆಚ್ಚು ಕಡಿಮೆ ಆದರೆ ಬಹುಷಃ—ಈ ಸರ್ಕಾರ ಅದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಈಗಾಗಲೇ ಇಬ್ಬರು ಮಾನ್ಯಸದಸ್ಯರು ಸಲಹೆ ಮಾಡಿದಹಾಗೆ ಅವರು ಅಮರಣಾಂತ ಉಪವಾಸವನ್ನು ಏನು ಕೈಕೊಂಡಿದ್ದಾರೆ ಅದನ್ನು ಅವರ ಮನವೊಲಿಸಿ ಕನ್‌ವಿನ್ಸ್ ಮಾಡಿ ಸೂಕ್ತ ರೀತಿಯಿಂದ ಸರ್ಕಾರ ಬಗೆಹರಿಸಬೇಕು. ಈ ಸ್ಟೇಟ್‌ಮೆಂಟ್‌ನಲ್ಲಿ ಹೇಳಿರತಕ್ಕಂಥಾದ್ದನ್ನು ನೋಡಿದರೆ ಸರ್ಕಾರ ಅದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿದ ಹಾಗೆ ಕಾಣಲಿಲ್ಲ. ಅವರ ಜೊತೆಯಲ್ಲಿ ಸರ್ಕಾರದವರು ಕೂಲಂಕುಷವಾಗಿ ವಿಚಾರ ಮಾಡಿ ಮಾತನಾಡಿದರೆ ಅವರು ಕನ್‌ವಿನ್ಸ್ ಆಗುತ್ತಾರೆ ಮತ್ತು ಉಪವಾಸವನ್ನು ನಿಲ್ಲಿಸುತ್ತಾರೆ. ಈ ಬಗ್ಗೆ ಇರತಕ್ಕಂಥ ಎಕ್ಸ್‌ಪರ್ಟ್ ಕಮಿಟಿಯವರು ಮುಂದೆ ಏನೊಂದು ವರದಿಯನ್ನು ಕೊಡುತ್ತಾರೋ ಅದನ್ನು ನಾವೆಲ್ಲರೂ ಈ ಮನೆಯಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಅದು ಮುಂದಿನ ವಿಚಾರ. ಅದನ್ನು ಅವರು ಮಾಡಲಿ. ಆದರೆ ಈಗಿರತಕ್ಕಂಥ ತುರ್ತು ಪರಿಸ್ಥಿತಿ ಎಂದರೆ ಆ 3 ಜನರು ಮಾಡುತ್ತಾ ಇರತಕ್ಕಂಥ ಅಮರಣಾಂತ ಉಪವಾಸವನ್ನು ನಿಲ್ಲಿಸತಕ್ಕಂಥಾದ್ದು ನನಗೂ ಜವಾಬ್ದಾರಿ ಇದೆ, ಹೆಚ್ಚಾಗಿ ಈ ಸರ್ಕಾರಕ್ಕೆ ಜವಾಬ್ದಾರಿ ಇದೆ. ಈ ಒಂದು ಸಮಸ್ಯೆಯನ್ನು ಬೇಗನೆ ಬಗೆಹರಿಸಬೇಕೆಂದು ಸರ್ಕಾರದವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಈ ಸಮಸ್ಯೆಯನ್ನು ಎಷ್ಟು ಬೇಗ ಬಗೆಹರಿಸುತ್ತಾರೆಂಬ ಬಗ್ಗೆ ವಿವರಣೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊನೆಯಲ್ಲಿ ಇರತಕ್ಕಂಥ ವಿಚಾರವನ್ನು ನಾವು ತೆಗೆದುಕೊಳ್ಳೋಣ. "The striking students and Junior Doctors recently i.e., on 2-3-1981. when an understanding was reached, that the students would call off the strik." That is the latest position. ಇದು ಲೇಟೆಸ್ಟ್ ಡಿಸಿಷನ್. ಇಲ್ಲಿ ಏನಾಗಿದೆ ಎಂದರೆ "The earlier Committee, consisting of the Health Minister, the Finance Secretary. the Chief Secretary and other people." ಇದರಲ್ಲಿ ಯಾರ್‍ಯಾರು ಇದ್ದಾರೆ ಅವರು ಡೈರೆಕ್ಷನ್ ಕಳಿಸಿದ್ದಾರೆ. ಅರ್ಲಿಯರ್ ಕಮಿಟಿ ಅಂದರೆ ಎಕ್ಸ್‌ಪರ್ಟ್ಸ್ ಕಮಿಟಿಗೆ ಹಿಂದಿನ ಕಮಿಟಿ ಫೆಬ್ರುವರಿ ಮೊದಲನೇ ವಾರದಲ್ಲಿ ಎಕ್ಸ್‌ಪರ್ಟ್ಸ್ ಕಮಿಟಿಯನ್ನು ರಚನೆ ಮಾಡಿತ್ತು. ಈ ತಜ್ಞ ಕಮಿಟಿಗಿಂತ ಹಿಂದೆ ಮೇಲಿನ ಇದ್ದಂಥ ಕಮಿಟಿ ಆ ರೀತಿ ನಿರ್ದೇಶನವನ್ನು ಕಾಲೇಜಿನವರಿಗೆ ಕಳಿಸಿದ್ದಾರೆ, ಅದು ವಿದ್ಯಾರ್ಥಿಗಳಿಗೂ ಗೊತ್ತಿದೆ. ವಿದ್ಯಾರ್ಥಿಗಳಿಗೆ ಅದು ಗೊತ್ತಿದ್ದೂ ಕೂಡ ಸ್ಟ್ರೈಕ್ ಕಾಲಾಫ್ ಮಾಡುತ್ತೇವೆಂದು 2-3-1981ರಂದು ಒಪ್ಪಿಕೊಂಡಿದ್ದಾರೆ. ಮೊದಲಿನ ಕಮಿಟಿಯವರು ಈ ಎರಡು ಕಾಲೇಜುಗಳಿಗೆ ಅಡ್ಮಿಷನ್ಸ್ ತೆಗೆದುಕೊಳ್ಳಬಾರದು ಎಂದು ಹಿಂದೆ ನಿರ್ದೇಶನ ಕಳಿಸಿದ್ದಾರೆ. ಈಗ ತಮ್ಮ ಹೇಳಿಕೆಯಿಂದ ಅದನ್ನೇ ರೇಕ್‌ಅಪ್ ಮಾಡುತ್ತಿದ್ದಾರೆ ಮೊದಲನೆ ಮತ್ತು 3ನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಅದರಿಂದ ಈಗ ಇರತಕ್ಕಂಥ ಪರಿಸ್ಥಿತಿ ಅನ್ನು ಕಾಂಪ್ಲಿಕೇಟ್ ಮಾಡಿದ್ದಾರೆ. ಈ 2 ಪ್ಯಾರಾಗಳಿಂದ ಏನು ಗೊತ್ತಾಗುತ್ತದೆ ಎಂದರೆ ಹಿಂದೆ ಹೇಳಿದನ್ನು ಮತ್ತು ರೇಕ್‌ಅಪ್ ಮಾಡಿದರೆ ಗೊಂದಲಕ್ಕೆ ಕಾರಣವಾಡಿದ್ದಾರೆ. ಅದು ಇಲ್ಲಿ ಬರಬಾರದಾಗಿತ್ತು. 2-3-81ರಲ್ಲಿ ಹಿಂದೆ ಆಗಿದ್ದಂಥ ತೀರ್ಮಾನಗಳನ್ನು ವಿದ್ಯಾರ್ಥಿಗಳು ಒಪ್ಪಿಕೊಂಡಿದ್ದಾರೆ. ಈಗ ಮತ್ತೆ ಅವರು ಹಿಂದೆ ಸರಿಯುವುದಾದರೆ ಯಾವುದೋ ಕಾರಣಗಳಿಂದ ಗೊಂದಲಗಳು ಆಗುತ್ತವೆ. ಅದಕ್ಕೆ ಅವಕಾಶ ಕೊಡದಂತೆ ಮಾನ್ಯ ಮುಖ್ಯಮಂತ್ರಿಯವರು ಮಧ್ಯಪ್ರವೇಶಿಸಿ ಕ್ರಮ ತೆಗೆದುಕೊಂಡು ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ನಾನು ಹೇಳುತ್ತೇನೆ.

SRI C.M. ARUMUGHAM (K.G.F.).—Sir, I certainly sympathise with these three students who under taken fast. I do not know what

are their demands. If the demands are there, the Minister as well may place them before the House so that we know them and as has been suggested by Sri Bommai that they, the striking students be called by the Chief Minister for a meeting with all the political parties' leaders, is a very good suggestion and it will certainly find a solution. I only want to bring to the notice of this House that some members, particularly Sri Alva has said that the strike by the Medicos are not against starting of Dr. Ambedkar Medical College and Kempegowda Medical College, which I do not accept. I do not agree.

SRI ALVA JEEVARAJ.—Let us confine ourselves to the matter. This is different matter. This wrong we will have to answer, and then it will go on.

SRI C.M. ARUMUGHAM.—Alright, let it go on.

(INTERRUPTION)

SRI JEEVARAJ ALVA.—People are going on indefinite fast; how can this be called 'politically motivated'. Repeatedly it is being told. Is it proper on the part of a senior member to create cleavage here?

SRI C.M. ARUMUGHAM.—Why are you talking like that. I am coming to the point. I say here now this agitation is started against giving permission to Dr. Ambedkar Medical College and Kempegowda Medical College.

SRI JEEVARAJ ALVA.—It is not correct. The agitation was started much earlier.

ಶ್ರೀ ಜೆ. ಎಚ್. ಪಟೇಲ್.—ಅದು ಸರಿಯಲ್ಲವೆಂದು ಹೇಳುವುದು ಸರಿಯಲ್ಲ. ಆ ಚರ್ಚೆ ಎಲ್ಲಿಗೂ ತೆಗೆದುಕೊಂಡು ಹೋಗುತ್ತದೆ. ಅದು ಸರಿಯಲ್ಲ.

SRI C.M. ARUMUGHAM.—I am repeating it. I say it hundred times because the agitation was started on the very next day of the announcement of the Government's permission to start Dr. Ambedkar Medical College. The very next day it was started not before that.

(INTERRUPTION)

MR. SPEAKER.—Please resume your seats, permit me to say something. Dr. Alva, if we were to go strictly according to rule, the Minister can only make a statement, no debate. Since the matter is a bit important one, I had allowed the members who are signatories to say something but unfortunately ideas were introduced by Mr. Ramdev and yourself also. You categorically said that the striking students are not for those things and all that. Since the

matter has been raised, members also wanted to say something. Any way, let us confine ourselves to the point and let us leave it at that. Sri Arumugham, I would only request you to leave it at that.

SRI C.M. ARUMUGHAM.—Mr. Speaker, please bear with me. On the very day the laying the foundation stone to Kempegowda Medical College, they had announced that they would demonstrate and prevent the Chief Minister from laying the foundation stone.

MR. SPEAKER.—Mr. Arumugham...............

SRI C.M. ARUMUGHAM.—No, please bear with me. There is a press statement. I have got that press statement by the students.

MR. SPEAKER.— We are not concerned at this stage with all these things. This is only...

SRI C. M. ARUMUGHAM.— The agitation is against the permission given to these two Medical Colleges. What I am trying to say is that on the very next day after the Government granted its permission...

MR. SPEAKER.— You have said something. May I request you to stop this at that only ? Please don't take up the matter further.

SRI C. M. ARUMUGHAM,— If this agitation is not against these Colleges, why should Dr. Rajkumar, President of the Karnataka State Junior Doctors' Association say, "despite the assurance by the Chief Minister that admission to the new Medical Colleges would not be allowed, this year the Kempegowda Medical College has gone ahead with admission and even notified that the Course would start soon". If they are not against it, they must allow the admission of students. Sir, I want to tell you one thing. To-day, our Hon. Chief Minister Mr. Gundu Rao has permitted Dr. Ambedkar Medical College ; tomorrow if he nationalises all these institutions, as Sri Devegowda said, we will surrender all these things without asking one Paise compensation. Let him do it. But we are not for it. In fact we thought that issue. After all, in the entire country, he is the first Chief Minister to give permission to Dr. Ambedkar Medical College. Nobody thought about it ; nobody formed any trust ; nobody asked for it. We have formed the trust. Demonstration was to take place on the day of laying foundation stone to Kempegowda Medical College but there was a counter statement that agitation would be started against this. Then, it was stopped. What I submit to the Speaker is, if they are not against these two Colleges, they must permit us to go ahead. The Government has permitted these two colleges, they have no business to write to us to go slow. We cannot go against the Government. He has written to delay further. It is hampering

the progress of these two colleges by the committee. It has hampered the progress and the agitation still continues. So far, we have not counter-acted and not started any counter-agitation. There are so many SCs/STs, Vokkaligas MLAs and Ministers are there, they are all interested in these Colleges and students also. Therefore, if they are not against these two Colleges, they should permit us to go ahead. Sri Kakkilaya said 'admission'. What is that 'admission' ? When we asked for nationalisation you allow us. Ramaiah College was started last year and he has not admitted any student from Karnataka he has admitted 97 students from Iran only. For that they are not starting the agitation. He must admit only Karnataka students. In this House, tomorrow let anybody bring a legislation that all medical colleges including the Kasturba Medical College and the Ramaiah Medical College shall be nationalised. We will all support without any compensation. We cannot claim compensation. Even the would be children have been registered with Kasturba Medical College and they admitted students from South Africa. from Arabian countries, from Burma from Singapore.

MR. SPEAKER.— Confine to this hunger strike issue please.

SRI C. M. ARUMUGHAM.— I am making it a little more elaborate so that I can make the discussion lively. For 20 years they have made property. But, still they are collecting donations, You say that you do not want Davanagere medical College, Belgaum Medical College, Gulbarga Medical College. First, you nationalise them without compensation. I will not ask the Chief Minister that as he allowed them for 20 years, he must allow Kempegowda Medical College and Dr. Ambedkar Medical College also for another 20 years. I will not go with that plea. What is the future course of action ? Is he going to permit all others to start Medical Colleges or will the Government include us so that we can have a final say in the issue. This is not against those two colleges. Mr. Speaker Sir, it is the greatness of Kempegowda. He founded the city. He was the ruler.

MR. SPEAKER.— We are not concerned about those things.

SRI C. M. ARUMUGHAM.— You may not be concerned. But, I am concerned with it.

MR. SPEAKER.— This is not the moment for discussion. I am not concerned with the history of Kempegowda. That is what I said.

SRI C.M. ARUMUGHAM.—I only said for the benefit of the Members I am now appealing to all those doctors who are on strike.

Sir, my daughter is in final M. B. B. S. I am affected personally as a father. But, I am proud that we are establishing Dr. Ambedkar

Medical College, a college of the people for the cause of SCs/STs. I told that Sri Gundu Rao is the first Chief Minister in the entire country, who is prepared to start this college. Sir, therefore, please help us to develop it. I will go one step further that I will place the accounts of the college every year in this House I will not do anything without consulting Sri Gundu Rao. And after all without him I will not run. I also told Sri Bommai and Sri Devegowda that both of them are welcome to join our trust. Therefore, tell them to call off this strike. Let them come and discuss with the Chief Minister as suggested by Sri Bommai so that we can find a solution to call off this strike.

ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ) . ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮೊದಲು ನಾನು ಒಂದು ಮಾತನ್ನು ಹೇಳಬೇಕಾಗಿದೆ. ಏನೆಂದರೆ ಈ ಒಂದು ವಿಷಯ ಎಷ್ಟು ಸೂಕ್ಷ್ಮವಾಗಿದೆ ಎಂದರೆ, ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳು ಸ್ಟ್ರೈಕ್ ಮಾಡುತ್ತಿರುವುದು ಡಾ. ಅಂಬೇಡ್ಕರ್ ಮೆಡಿಕಲ್ ಕಾಲೇಜಿನ ವಿರುದ್ಧವಾಗಿ ಹಾಗೂ ಕೆಂಪೇಗೌಡ ಮೆಡಿಕಲ್ ಕಾಲೇಜಿನ ವಿರುದ್ಧವಾಗಿ ಎಂದು ಸರ್ಕಾರದವರೇ ಹೇಳುವುದಕ್ಕೆ ಹೊರಟಿದ್ದಾರೆ. ಈ ವಿಷಯದ ಮೇಲೆ ಈ ಮನೆಯ ಮಾನ್ಯ ಹಿರಿಯ ಸದಸ್ಯರು ಮಾತನಾಡುವಾಗ ಸಬ್ಜೆಕ್ಟ್ ಮ್ಯಾಟರ್ ಬಿಟ್ಟು ಹೋಗುತ್ತಿದ್ದಾರೆಂದು ಅವರ ಗಮನಕ್ಕೆ ತರಬೇಕೆಂಗಿದ್ದೆ, ಆದರೆ ಅವರು ತಮ್ಮ ವಿರುದ್ಧವಾಗಿ ನಾನು ಹೇಳಲು ಹೊರಟಿದ್ದೆನೆಂದು ತಿಳಿದುಕೊಳ್ಳಬಹುದೆಂಬ ಭಯದಿಂದ ನಾನು ಸುಮ್ಮನೆ ಇದ್ದೆ. ಈ ಎರಡು ಕಾಲೇಜುಗಳ ವಿರುದ್ಧವಾಗಿ ವಿದ್ಯಾರ್ಥಿಗಳು ಚಳುವಳಿ ಪ್ರಾರಂಭ ಮಾಡಿದ್ದಾರೆಂದು ಮಾನ್ಯ ಆರ್ಮುಗಂ ಅವರು ಏನಾದರು ಹೇಳಿದ್ದರೆ, ನಾನು ಈಗ ಏನೂ ಮಾತನಾಡುತ್ತಿರಲಿಲ್ಲ. ಆದರೆ ಈ ವಿಷಯವನ್ನು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಆ ವಿದ್ಯಾರ್ಥಿಗಳ ಹತ್ತಿರ ಮಾತನಾಡಿದ ಮೇಲೆ ವಿಷಯ ಏನೆಂಬುದು ಅವರಿಗೆ ಗೊತ್ತಾಗಿರಬೇಕು. ಅವರು ಯಾವ ಕಾರಣಕ್ಕಾಗಿ ಸ್ಟ್ರೈಕ್ ಮಾಡುತ್ತಿದ್ದಾರೆಂಬ ಬಗ್ಗೆ ಎರಡನೇ ತಾರೀಖು ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಆದಕಾರಣ ನಿಜಸಂಗತಿಯನ್ನು ಮುಖ್ಯಮಂತ್ರಿಗಳು ಹೇಳಬಹುದಾಗಿತ್ತು. ಈಗ ದಾವಣಗೆರೆಯಲ್ಲಿ, ಗುಲ್ಬರ್ಗದಲ್ಲಿ ಹಾಗೂ ಬೆಳಗಾಂನಲ್ಲಿ ಲಿಂಗಾಯಿತರು ಮೆಡಿಕಲ್ ಕಾಲೇಜ್‌ಗಳನ್ನು ಪ್ರಾರಂಭ ಮಾಡಿದಾಗ ಹಾಗೂ ಮಣಿಪಾಲ್‌ನಲ್ಲಿ ಬ್ರಾಹ್ಮಣರು ಮೆಡಿಕಲ್ ಕಾಲೇಜು ಪ್ರಾರಂಭ ಮಾಡಿದಾಗ ಯಾವ ಚಳುವಳಿಯೂ ನಡೆಯಲಿಲ್ಲ. ಆದರೆ ಒಕ್ಕಲಿಗರು ಮತ್ತು ಹರಿಜನರು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುವ ಕಾಲಕ್ಕೆ ಈ ಒಂದು ವಾದವನ್ನು ಏನು ತಂದಿದ್ದಾರೆ, ಇದು ಸರಿಯಲ್ಲ. It is most unfortunate. I still say it is most unfortunate.

ಶ್ರೀ ಕೆ. ಎಚ್. ಹನುಮೇಗೌಡ .—ಇದು ಸತ್ಯಕ್ಕೆ ದೂರವಾದ ಮಾತು. ರಾಮಯ್ಯ ಮೆಡಿಕಲ್ ಕಾಲೇಜು ಪ್ರಾರಂಭವಾದಾಗ ಯಾರೂ ಚಳುವಳಿ ಮಾಡಲಿಲ್ಲ. ಆದರೆ ಕೆಂಪೇಗೌಡ ಮೆಡಿಕಲ್ ಕಾಲೇಜು ಪ್ರಾರಂಭವಾಗುವ ಕಾಲಕ್ಕೆ ಇದೆಲ್ಲಾ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ಹಕ್ಕಿಗೆ ಏನಾದರೂ ಧಕ್ಕೆ ಬಂದರೆ, ನಾವು ಹೋರಾಟ ಮಾಡಲೇ ಬೇಕಾಗುತ್ತದೆ.

ಅಧ್ಯಕ್ಷರು.— ಒಬ್ಬರು ಸದಸ್ಯರು ಮಾತನಾಡುವಾಗ ಅವರು ಏನು ಹೇಳುತ್ತಾರೆಂಬುದನ್ನು ಬೇರೆಯವರು ಕೇಳಬೇಕಾಗುತ್ತದೆ. ಮತ್ತು ಅವರು ಮಾತನಾಡಿ ಮುಗಿಸುವುದಕ್ಕೆ ಮೊದಲೇ ಈ ರೀತಿ ಮಧ್ಯದಲ್ಲಿ ಮಾತನಾಡುವುದು ಸರಿಯಲ್ಲ. ಚರ್ಚೆನಡೆಯುವ ಸಂದರ್ಭದಲ್ಲಿ ಜಗಳ ಮಾಡುವುದು ಸರಿಯಲ್ಲ. We debate here. We do not quarel. Let us leave it to the public also. We expressed our opinion. We allow this to come out. The public will judge what we say. It is not by obstructing one or the other. He is on his legs. I am sorry if you both have not touched these things, it would not have happened. You would have helped those people who are on hunger strike.

ಶ್ರೀ ಜೆ. ಎಚ್. ಪಟೇಲ್.— ನಾನು ಇಷ್ಟೇ ಹೇಳುತ್ತಿರುವುದು, ಏನೆಂದರೆ, ಸರ್ಕಾರದವರೇ ಈ ರೀತಿಯ ವಾತಾವರಣವನ್ನು ನಿರ್ಮಾಣ ಮಾಡಿದ್ದು ಅನ್-ಫಾರ್ಚುನೆಟ್ ಎಂದು, ಏಕೆಂದರೆ, ಲಿಂಗಾಯಿತರು ಮೆಡಿಕಲ್ ಕಾಲೇಜ್ ಪ್ರಾರಂಭ ಮಾಡಿದಾಗ ಅವರ ಜನಾಂಗಕ್ಕೆ ಮಾತ್ರ ಅನುಕೂಲವಾಗುತ್ತದೆಂದು ತಿಳಿದುಕೊಳ್ಳುವುದು ತಪ್ಪು. ನನ್ನ ಮಗನಿಗೇ ಸೀಟ್ ಸಿಗಲಿಲ್ಲ. ಸೀಟ್ ಕೊಡಲು ೬೦ ಸಾವಿರ ರೂ. ಗಳನ್ನು ಕೇಳಿದರು. ಆದರೆ ನನಗೆ ಅಷ್ಟು ದುಡ್ಡು ಕೊಡುವುದಕ್ಕಾಗಲಿಲ್ಲ. ಆದಕಾರಣ ವಕ್ಕಲಿಗರೇ ಆಗಲೀ, ಲಿಂಗಾಯಿತರೇ ಆಗಲೀ ಅಥವಾ ಹರಿಜನರೇ ಆಗಲೀ, ಯಾರಿಗೇ ದುಡ್ಡು ಕೊಡುವುದಕ್ಕೆ ಆಗುವುದಿಲ್ಲವೋ,ಅಂತಹವರಿಗೆ ಈ ಕಾಲೇಜುಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಆದಕಾರಣ ಇಲ್ಲಿ ಜಾತಿಯನ್ನು ಆಧಾರವಾಗಿಟ್ಟುಕೊಂಡು ಮಾತನಾಡುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ .— ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಷಯ ತರುವುದೇನೆಂದರೆ, ದಾವಣಗೆರೆಯಲ್ಲಿ ಮೊದಲನೇ ವರ್ಷ ಕಾಲೇಜು ಪ್ರಾರಂಭವಾದಾಗ ಅಲ್ಲಿ ಇದ್ದಂಥ ೧೨೦ ಜನರ ಪೈಕಿ ೪ ಜನ ಮಾತ್ರ ಲಿಂಗಾಯಿತರಿದ್ದರು.

ಶ್ರೀ ಜೆ. ಎಚ್. ಪಟೇಲ್ .— ಆದಕಾರಣ ಇದನ್ನು ಅನಾವಶ್ಯಕವಾಗಿ ಬೇರೊಂದು ರೀತಿಯಲ್ಲಿ ತಿರುಗಿಸುವುದಕ್ಕೆ ಹೋಗುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳು ನಗುತ್ತಿದ್ದಾರೆ. ಅವರು ವಿದ್ಯಾರ್ಥಿಗಳ ಹತ್ತಿರ ಮಾತನಾಡಿದಾಗ ....

ಅಧ್ಯಕ್ಷರು .— ನೀವು ಯಾವುದೋ ರೀತಿಯಲ್ಲಿ ಹೋದರೆ, ಅವರು ಏನು ಮಾಡುತ್ತಾರೆ ?

ಶ್ರೀ ಜೆ. ಎಚ್. ಪಟೇಲ್ .— ಈ ಮೊದಲು ಇದೇ ವಿಚಾರದಲ್ಲಿ ಇಲ್ಲಿ ಸಾಕಷ್ಟು ಚರ್ಚೆ ಆಗಿದೆ. ಹೊಸದಾಗಿ ಕಾಲೇಜುಗಳನ್ನು ತೆಗೆಯಬೇಕಾದರೆ ಏನೇನು ಸೌಲಭ್ಯಗಳು ಇರಬೇಕಾಗುತ್ತದೆ ಎಂಬ ಬಗ್ಗೆ ತಾವು ತಜ್ಞರ ಅಭಿಪ್ರಾಯ ಪಡೆದುಕೊಂಡು, ಅದನ್ನು ಇಲ್ಲಿ ಹೇಳಿದ್ದೀರಿ. ಮತ್ತು ಹೊಸದಾಗಿ ಎರಡು ಕಾಲೇಜುಗಳನ್ನು ತೆರೆಯಲು ತಾವು ಅನುಮತಿ ಕೊಟ್ಟಿದ್ದೀರಿ. ಈ ಹಂತದಲ್ಲಿ ಇವರ ಬಗ್ಗೆ ಹೆಚ್ಚು ಚರ್ಚೆ ಮಾಡುವುದು ಬೇಡ. ಮುಂದೆ ಹೊಸ ಕಾಲೇಜುಗಳನ್ನು ಸ್ಥಾಪನೆ ಮಾಡಲು ಅನುಮತಿ ಕೊಡುವ ವಿಚಾರದಲ್ಲಿ ತಜ್ಞರ ಸಮಿತಿ ಅಭಿಪ್ರಾಯ ಬಂದನಂತರ ಕೊಡೋಣ ಎಂದು ತಾವು ಹೇಳಿದ್ದೀರಿ. ಆದರೆ ಈಗ ಈ ಚಳವಳಿಯ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವಾಗ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ

> "Their strike is against the permission granted by the Government to start the Kempegowda Medical College, Bangalore and Dr. B. R. Ambedkar Medical College, Bangalore" ....

ಎನ್ನತಕ್ಕಂಥ ವಿಚಾರವನ್ನು ಹೇಳುವ ಅಗತ್ಯವಾದರೂ ಏನಿತ್ತು ? ಇದನ್ನು ಇಲ್ಲಿ ಹೇಳದಿದ್ದರೆ ಇಲ್ಲಿ ಯಾರೂ ಸಹ ಇದನ್ನೆಲ್ಲಾ ಪ್ರಸ್ತಾಪ ಮಾಡುತ್ತಿರಲಿಲ್ಲ.

4-00 P. M.

SRI A. LAKSHMISAGAR — This is a mischievous statement. I have their printed memorandum with me. I have preserved all those documents. The boys never said that. They came to us not once, but several times.

MR. SPEAKER .— If I am not mistaken, I should like to say one thing. In fact, I should not express them. Why the students should not give wide publicity about their impression publicly ? What do you say about the statement in the press that was read by Sri Arumugham ? All of us are interested in helping the students to break their fast and to take up their examinations. With that end in view they must say boldly and candidly what are their

intentions are publicly to the press. It is only a suggestion and I am not expressing my opinion or something else.

ಶ್ರೀ ಜೆ. ಎಚ್. ಪಟೇಲ್ .— ತಾವು ಸರಿಯಾಗಿ ಹೇಳಿದಿರಿ. ಯಾವಾಗಲೂ ಸಹ ವಿದ್ಯಾರ್ಥಿಗಳು ಅದನ್ನು ಮಾಡಿದರು. ಇದನ್ನು ಮಾಡಿದರು. ವಿನಾಕಾರಣ ಕ್ಲಾಸಿಗೆ ಬರದೇ ಇದ್ದರು ಎಂದು ಹೇಳಬಹುದು. ಕೆಂಪೇಗೌಡರ ಇತಿಹಾಸದ ಬಗ್ಗೆ ಹೇಳುವುದಾದರೆ, ಡಾ. ಅಂಬೇಡ್ಕರ್‌ರವರ ಬಗ್ಗೆ ಹೇಳುವುದಾದರೆ ಗಂಟೆಗಟ್ಟಲೆ ಹೇಳಬಹುದು. ಆದರೆ ಉಪವಾಸ ಸತ್ಯಾಗ್ರಹ ನಿಲ್ಲಿಸುವುದಕ್ಕೆ ೨ನೇ ತಾರೀಖು ಮಾತನಾಡಿದಾಗ ಏನು ಹೇಳಿದ್ದರು. ಈಗ ನಿಲ್ಲಿಸುವುದಕ್ಕೆ ಏನು ಮಾಡುತ್ತೀರಿ. ಒಕ್ಕಲಿಗರು, ಹರಿಜನರು, ಇನ್ನೂ ಬರಬಾರದ್ದೆಲ್ಲಾ ಬಂತು. ಅದು ಕೂಡದು. ಆದುದರಿಂದ ಅದು ಬರದ ಹಾಗೆ ತಾವು ಇದನ್ನು ಕ್ಲಿಯರ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ ತಂದ ಗಮನ ಸೆಳೆಯುವ ಸೂಚನೆಯ ಮೇಲೆ ಇಲ್ಲಿಯವರೆಗೆ ಸಾಕಷ್ಟು ಚರ್ಚೆ ಆಯಿತು. ಮಾನ್ಯ ಆರೋಗ್ಯ ಮಂತ್ರಿಗಳು ಸದನದಲ್ಲಿ ಒಂದು ಸ್ಟೇಟ್‌ಮೆಂಟನ್ನು ಮಾಡಿದ್ದಾರೆ. ವಿದ್ಯಾರ್ಥಿಗಳು ಸುಮಾರು ಮೂರು ಸಾರಿ ನನ್ನ ಜೊತೆಯಲ್ಲಿ ಮಾತನಾಡಿದರು ಮೂರು ಮೂರು, ನಾಲ್ಕು ನಾಲ್ಕು ಗಂಟೆಗಳ ಕಾಲ ಮಾತನಾಡಿದ್ದು ಆಯಿತು. ಅವರಿಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸಿದೆ.ಅದನ್ನು ಅವರು ಒಪ್ಪಿಕೊಂಡು ಹೋಗಿದ್ದರು ; ಒಪ್ಪಿಕೊಳ್ಳದೇ ಹೋಗಿರಲಿಲ್ಲ. ಅವತ್ತಿನ ದಿವಸ ಏನು ಸ್ಟೇಟ್‌ಮೆಂಟ್ ಇತ್ತೋ ಆ ಸ್ಟೇಟ್‌ಮೆಂಟ್ ಪ್ರಕಾರವೇ,ಅದೇ ಸ್ಟೇಟ್‌ಮೆಂಟನ್ನೇ ಇವತ್ತೂ ಇಟ್ಟಿದ್ದೇವೆ. ಇವತ್ತು ಮಾನ್ಯ ಆರೋಗ್ಯ ಮಂತ್ರಿಗಳು ಮಾಡಿರುವುದೂ ಅದೇ ಸ್ಟೇಟ್‌ಮೆಂಟ್. ಅಂದರೆ ಮಾನ್ಯ ಆರ್ಮುಗಂರವರು, ಮಾನ್ಯ ದೇವೇಗೌಡರು ಹಾಗೂ ಇನ್ನಿತರ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಎರಡು ಮೆಡಿಕಲ್ ಕಾಲೇಜುಗಳು ಪ್ರಾರಂಭವಾಗುವಾಗ ಸ್ಟೇಟ್‌ಮೆಂಟ್ ನೀಡಿದ್ದು ನಿಜ. ಶಂಕುಸ್ಥಾಪನೆ ಮಾಡುವುದಕ್ಕೆ ಮುಖ್ಯ ಮಂತ್ರಿ ಬಂದರೆ ತಡೆಯುತ್ತೇವೆ ಎಂದು ಅವರು ಹೇಳಿದ ಮಾತು ನಿಜ. ಕಳೆದ ಸಾರಿ ಅವರು ನನ್ನನ್ನು ಭೇಟಿ ಮಾಡಿದಾಗ ನಾನು, ಹೇಳಿದ್ದೇನೆ. ಇನ್ನೂ ಮೆಡಿಕಲ್ ಕಾಲೇಜುಗಳು ಬೇಕು ಎಂಬ ಕೆಲವಾರು ಅರ್ಜಿಗಳು ನಮ್ಮ ಮುಂದಿವೆ ಇದರ ಬಗ್ಗೆ ಕಮಿಟಿ ಆಗುವವರೆಗೆ ಅದನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದೇನೆ. ಆದುದರಿಂದ ನಿಮ್ಮ ಅಭಿಪ್ರಾಯದ ಪ್ರಕಾರ ಒಂದು ಸಮಿತಿ ಮಾಡಿದ್ದೇನೆ. ಆ ಸಮಿತಿಯಲ್ಲಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ನವರು ಇರಬಹುದು, ಯಾರು ಬೇಕಾದರೂ ಇರಬಹುದು ಎಂದು ಹೇಳಿದ್ದನ್ನು ಒಪ್ಪಿಕೊಂಡಿದ್ದಾರೆ. ಮಾನ್ಯ ಕೆ.ಎಚ್. ಶ್ರೀನಿವಾಸ್ ಅವರು ಹೇಳಿದ ಹಾಗೆ ಇಂತಹವರು, ಅಂತಹವರು ಎಂದು ಹೇಳೇ ಇಲ್ಲ. ಸಾಧ್ಯವಾದರೇ ಪ್ರೆಸಿಡೆಂಟೇ ಇರಲಿ, ಅವರು ಬರುವುದಕ್ಕೆ ಆಗದೇ ಹೋದರೆ ಕಾರ್ಯದರ್ಶಿಯವರನ್ನು ಕಳಿಸಿಕೊಡಿ, ಅವರೂ ಬರಲಿಕ್ಕೆ ಆಗದೇ ಹೋದರೆ ಇನ್ಯಾರನ್ನಾದರೂ ಕಳಿಸಿಕೊಡಿ ಎಂದು ಹೇಳಿದ್ದೇನೆ. ಇದಕ್ಕಿಂತ ಇನ್ನೇನು ಹೇಳಬೇಕು ಅವರಿಗೆ. We have abundantly made it clear that they may send any representative. But we want one representative each from the Indian Medical Council and the Indian Medical Association to be present in the Committee. ಆಮೇಲೆ ಪ್ರೊಫೆಷನಲ್‌ನಲ್ಲಿರುವವರು ಇರಬೇಕು ಅಂದಿದ್ದಕ್ಕೆ ಡಾಕ್ಟರನ್ನು ಹಾಕಿದ್ದೇನೆ, ನಮ್ಮ ಡೈರೆಕ್ಟರ್ ಇದ್ದಾರೆ, ಹೆಲ್ತ್ ಮಿನಿಸ್ಟರ್ ಇದ್ದಾರೆ, ಫೈನಾನ್ಸ್ ಮಿನಿಸ್ಟರ್ ಇದ್ದಾರೆ. ಈ ಸಮಿತಿಯು ವಿಚಾರ ಮಾಡುತ್ತದೆ. ಈ ಸಮಿತಿ ವಿಚಾರ ಮಾಡುವವರೆಗೆ ಹೊಸ ಮೆಡಿಕಲ್ ಕಾಲೇಜನ್ನು ಕೊಡುವುದಿಲ್ಲ. ಸರ್ಕಾರಕ್ಕೆ ನಿಲ್ಲಿಸಬೇಕು ಎಂದು ಕಾನೂನು ಪ್ರಕಾರ ಇಲ್ಲ. ಅವರು ವಿದ್ಯಾರ್ಥಿಗಳಿದ್ದಾರೆ, ಯುವಕರಿದ್ದಾರೆ. ಅವರಿಗೆ ಬಹಳ ವಿಷದವಾಗಿ ಹೇಳಿ, ನೀವು ನಮ್ಮ ಮೇಲೆ ಭರವಸೆ ಇಟ್ಟು ಕಾಲ್ ಆಫ್ ಮಾಡಿ, ಮತ್ತೆ ಆ ಸಮಿತಿಗೆ ಕಡ್ಡಾಯವಾಗಿ ಎಲ್ಲರನ್ನೂ ಕರೆದು ಅಭಿಪ್ರಾಯ ಪಡೆದುಕೊಳ್ಳಬೇಕು ಎಂದು ಆದೇಶ ಕೊಡುತ್ತೇನೆ ಎಂದು ಹೇಳಿದ್ದೇನೆ. It is a mandate on the Committee. They should call these representatives ; ಏಕೆಂದರೆ ಅವರಲ್ಲಿ ಬೇಕಾದಷ್ಟು ಅಸೋಸಿಯೇಷನ್‌ಗಳು ಇರುತ್ತವೆ, ಬೇಕಾದಷ್ಟು ಕಾಲೇಜುಗಳಿವೆ, ಮಣಿಪಾಲ್, ದಾವಣಗೆರೆ, ಬೆಳಗಾಂ ಮೆಡಿಕಲ್ ಕಾಲೇಜುಗಳವರೆಲ್ಲರನ್ನೂ ಕರೆದು ವಿಚಾರ ಮಾಡಿ ಎಂದು ಹೇಳಿದ್ದೇನೆ. ಸಮಿತಿಯವರು ವಿಚಾರ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಕಳಿಸಿಕೊಡು

ತ್ತಾರೆ. ನಂತರ ನಾವು ವಿಚಾರ ಮಾಡುತ್ತೇನೆ, ಮುಂದೆ ಮೆಡಿಕಲ್ ಕಾಲೇಜುಗಳನ್ನು ಕೊಡಬೇಕೋ ಬೇಡವೊ ಎನ್ನುವುದರ ಬಗ್ಗೆ ವಿರೋಧ ಪಕ್ಷದ ಸದಸ್ಯರನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿದೆ. ಯಾವುದೇ ಜಟಿಲ ಸಮಸ್ಯೆ ಬಂದಾಗ ನಾನು ಮುಖ್ಯ ಮಂತ್ರಿಯಾಗಿ ಬಂದಾಗಿನಿಂದ ಒಂದು ಸಾರಿಯೂ ತಮ್ಮನ್ನು ಕರೆಯದೆ ತೀರ್ಮಾನ ಕೈಕೊಂಡಿಲ್ಲ. ೧೫ ತಿಂಗಳಲ್ಲಿ ನಾನು ಕರೆದಷ್ಟು ೨೫ ವರ್ಷಗಳಲ್ಲಿ ಯಾವ ಸರ್ಕಾರವೂ ಕರೆದಿಲ್ಲ. ಏಕೆ ಕರೆಯಬೇಕು. It is not a mandate on the part of the Government; but it is necessary in the present democratic set up that we should take Opposition into confidence because they are equally responsible. It is not that the Government alone is responsible. Opposition is also equally responsible because they have got as much right as we have got here. Just because they are in a minority they are in the Opposition. Tomorrow they may become mojority and we may became miniority and we will be in Opposition. ಆದುದರಿಂದ ಸರ್ಕಾರದ್ದೇ ಆಜನ್ಮಸಿದ್ಧವಾದ ಹಕ್ಕು ಎನ್ನತಕ್ಕ ಮುಖ್ಯಮಂತ್ರಿ ನಾನಲ್ಲ. ರೈತರ ಸಮಸ್ಯೆ ಬರಲಿ. ಕಾರ್ಮಿಕರ ಸಮಸ್ಯೆ ಬರಲಿ ವಿದ್ಯಾರ್ಥಿಗ ಸಮಸ್ಯೆಬರಲಿಎಲ್ಲರೂ ಕುಳಿತು ಚರ್ಚೆ ಮಾಡೋಣ Ultimately, Government may agree or may not agree. That is a different matter. ಕಾನೂನು ಪ್ರಕಾರ, ರಾಜ್ಯಾಂಗದ ಪ್ರಕಾರ ಎಲ್ಲರನ್ನೂ ಕರೆಯಬೇಕಾಗಿಲ್ಲ. ಆ ಪ್ರಶ್ನೆಗೆ ನಾನು ಹೋಗುವುದಿಲ್ಲ. ಎಲ್ಲಾ ವಿರೋಧ ಪಕ್ಷಗಳ, ವಿವಿಧ ರಾಜಕೀಯ ಪಕ್ಷಗಳ ನಾಯಕರುಗಳನ್ನು ಕರೆದು, ಕಮಿಟಿ ರಿಪೋರ್ಟ್ ಬಂದಮೇಲೆ ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡೋಣ, ಒಂದು ಒಳ್ಳೆಯ ವಾತಾವರಣಕ್ಕೆ ಬರೋಣ ಎಂದು ಹೇಳಿದೆ. ಮತ್ತೆ ವಿದ್ಯಾರ್ಥಿಗಳಿಗೆ, ನಿಮಗೆ ಅನೇಕ ವಿಷಯಗಳು ಅರ್ಥವಾಗುವುದಿಲ್ಲ, ಜೆನಿಯನ್ ಕಾರಣ ಇರಬಹುದು, ಆದರೆ ಪ್ರಜಾಪ್ರಭುತ್ವದ ಪ್ರಕಾರ ಅನೇಕ ವಿಚಾರಗಳನ್ನು ನೋಡಿಕೊಂಡು ನಡೆಸಬೇಕಾಗುತ್ತದೆ; ನೀವು ವಿಷಯವನ್ನು ನಮ್ಮ ಮನಸ್ಸಿಗೆ ಮುಟ್ಟಿಸಿದ್ದೀರಿ, ಇನ್ನು ನಮಗೆ ಹೇಳಬೇಕಾದ ಅವಶ್ಯಕತೆ ಇಲ್ಲ, ನೀವು ಪರೀಕ್ಷೆಗಳಿಗೆ ಹೋಗದಿದ್ದರೆ ತೊಂದರೆಯಾಗುತ್ತೆ ಎಂದು ಹೇಳಿದೆ. ಅವರು ನಮ್ಮ ಮೇಲೆ ಇರತಕ್ಕ ಪೋಲೀಸ್ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದರು. ನೀವು ಬೇಕಾದಷ್ಟು ದುಡ್ಡನ್ನು ಖರ್ಚು ಮಾಡಿ ಪರೀಕ್ಷೆಗಳಿಗೆ ಕುಳಿತುಕೊಂಡಿರುತ್ತೀರಿ, ನಿಮ್ಮ ತಂದೆ ತಾಯಿಗಳು ಬಂದು ನಮ್ಮನ್ನು ಭೇಟಿ ಮಾಡುತ್ತಿದ್ದಾರೆ, ನಮ್ಮ ಮಕ್ಕಳು ಓದುತ್ತಿದ್ದಾರೆ ಪರೀಕ್ಷೆಗಳಿಗೆ ಹೋಗದಿದ್ದರೆ ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದಾರೆ, ಆದ್ದರಿಂದ ನೀವು ಈ ರೀತಿ ಮಾಡಬೇಡಿ, ಸಾಕಷ್ಟು ಎಲ್ಲರ ಗಮನವನ್ನು ಸೆಳೆದಿದ್ದೀರಿ. ಇನ್ನು ಬಿಟ್ಟು ಬಿಡಿ, ನಾವೆಲ್ಲರೂ ಸೇರಿ ಮಾತನಾಡುವಾಗ ಇನ್ನೊಂದು ಸಾರಿ ನಿಮ್ಮನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿದೆ. ಆಗ ಮೂರು ಮೂರು, ನಾಲ್ಕು ನಾಲ್ಕು ಗಂಟೆಗಳ ಕಾಲ ಕುಳಿತು ಮಾತನಾಡಿದ್ದೇನೆ. ಹಿಂದೆ ಯಾವ ಮುಖ್ಯ ಮಂತ್ರಿಯೂ ಈ ರೀತಿ ಕರೆದಿಲ್ಲ. ಅವರೂ ಯುವಕರಿದ್ದಾರೆ, ನಾನೂ ಎಂಗೆಸ್ಟರ್, ಆದ್ದರಿಂದ ಕರೆದು ಮಾತನಾಡಿದ್ದೇನೆ. ಅವರಲ್ಲೇ ಭಿನ್ನಾಭಿಪ್ರಾಯ ಬಂತು. ನಾವೆಲ್ಲಾ ಸೇರಿ ಸಾಯಂಕಾಲ ಮೀಟಿಂಗ್ ಮಾಡಿ ನಿಲ್ಲಿಸುತ್ತೇವೆ ಎಂದು ಹೇಳಿದರು, ಆಮೇಲೆ ಹೋಗಿ ಇದನ್ನು ಮಾಡಿದರು.

ಈಗ ಇದು ಏನಾಗಿದೆ ಎನ್ನುವಂಥಾದ್ದನ್ನು ತಮಗೆಲ್ಲರಿಗೂ ಸ್ಪಷ್ಟಪಡಿಸುತ್ತೇನೆ. ನಾನು ಅವರನ್ನೆಲ್ಲಾ ಕರೆದು ಮಾತನಾಡಿದ್ದೇನೆ. ನನ್ನ ಮಟ್ಟದಲ್ಲಿ ೩ ಸಾರಿ ಕರೆದು ಮಾತನಾಡಿದ್ದು ಆಯಿತು, ೩ ಸಾರಿ ಅವರನ್ನು ಕರೆದು ಮಾತನಾಡಿಸಿದ್ದರೂ ಕೂಡ ಅವರು ಸ್ಟ್ರೈಕ್‌ನ್ನು ವಾಪಸ್ಸು ತೆಗೆದುಕೊಳ್ಳುವ ವರ್ತನೆ ಮಾಡಿಲ್ಲ. There should be some limit. ಚೀಫ್ ಮಿನಿಸ್ಟರ್ ಆಗಿ ನಾನು ಇವತ್ತು ಇರಬಹುದು ನಾಳೆ ಶ್ರೀ ಬೊಮ್ಮಾಯ್‌ರವರು ಆಗಬಹುದು. ಅದು ಪ್ರಶ್ನೆಯಲ್ಲ, ನಾನು ಅವರನ್ನು ೩ ಸಾರಿ ಕರೆದು ಮಾತನಾಡಿದ್ದರೂ ಸಹ ಅವರು ನನ್ನ ಮಾತನ್ನು ನಡೆಸಿಕೊಡದೇನೆ ಪುನಃ ಸ್ಟ್ರೈಕ್ ಶುರು ಮಾಡಿದ್ದಾರೆ. ಯಾವುದೇ ಮಟ್ಟದಲ್ಲಿ ಚರ್ಚೆಯಾಗಿರಲಿ, ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ೫ ಪಾಯಿಂಟ್ಸ್‌ಗಳನ್ನು ಹೇಳಿದ್ದಾರೆ, ಅದರಲ್ಲಿ ಐದನ್ನೂ ಒಪ್ಪುವುದಕ್ಕೆ ಆಗದೇ ಇರಬಹುದು ಅದರಲ್ಲಿ ಅವರು ಹೇಳಿದ ಪ್ರಕಾರ ಕಮಿಟಿ ಕಾನ್ಸ್‌ಟಿಟ್ಯೂಟ್ ಮಾಡಿದ್ದೇವೆ, ಮತ್ತೆ ಅವರು ಹೇಳಿದ ಪ್ರಕಾರವೇ ಯಾರು ಯಾರು ರೆಪ್ರಜೆಂಟೆಟಿವ್ಸ್ ಇರಬೇಕೆಂದು ಹೇಳಿದ್ದರೋ ಅದೇ

ಪ್ರಕಾರವಾಗಿ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದೇನೆ. ಇಷ್ಟೆಲ್ಲಾ ಹೇಳಿದ ಮೇಲೂ ಕೂಡ ವಿಶ್ವಾಸ ವಿಟ್ಟು ಅವರು ಹೋಗಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ ಪರೀಕ್ಷೆಗಳು ಹೋಗುತ್ತವೆ. ನಾವು ಇವರ ಬಗ್ಗೆ ಕೂತು ಚರ್ಚೆ ಮಾಡಿ ಇತ್ಯರ್ಥ ಮಾಡೋಣವೆಂದು ಹೇಳಿದರೂ ಕೂಡ ಅವರು ಸತ್ಯಾಗ್ರಹ ಮಾಡುತ್ತೇವೆಂದರೆ, ಆಗ ಪೋಲೀಸಿನವರು ಬಂದು ಲಾಠಿ ಚಾರ್ಜ್ ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವೂ ಅಲ್ಲ ಮುಂದೆ ಮೆಡಿಕಲ್ ಕಾಲೇಜ್‌ಗಳನ್ನು ಕೊಡಬೇಕೋ ಬಿಡಬೇಕೋ ಎನ್ನುವ ಬಗ್ಗೆ ಕಮಿಟಿಯವರು ಏನು ವರದಿ ಕೊಡುತ್ತಾರೋ ಅದನ್ನು ಆದರಿಸಿ ಮಾಡೋಣ. ಮಾನ್ಯ ಶ್ರೀ ದೇವೇಗೌಡರವರು ಡಾ. ಅಂಬೇಡ್ಕರ್‌ರವರ ಮತ್ತು ಕೆಂಪೇಗೌಡ ಮೆಡಿಕಲ್ ಕಾಲೇಜ್ ಬಗ್ಗೆ ಹೇಳಿದರು. I stand by that. We have given permission to these two colleges. ಮುಂದಕ್ಕೆ ಪರ್ಮಿಷನ್ ಕೊಡಬೇಕಾದರೆ ಕಮಿಟಿಯವರ ರಿಪೋರ್ಟ್‌ನ್ನು ವೇಟ್ ಮಾಡೋಣ. ಇವತ್ತು ನಮ್ಮ ಹತ್ತಿರ ೧೦೦, ೧೫೦, ೨೦೦ ಜನ ಮೆಡಿಕಲ್ ಕಾಲೇಜ್‌ಗಳು ಬೇಕು ಅಂತ ಬಹಳ ಪ್ರಾಮುಖ್ಯವಾದ ವ್ಯಕ್ತಿಗಳು ಅಪ್ಲಿಕೇಷನ್ ಹಿಡಿದುಕೊಂಡು ಬಂದಿದ್ದಾರೆ. You cannot just brush aside those applications. We have got to examine them. As Chief Minister of the State I have to consider them. ಲೇಜಿಸ್ಲೇಟರ್ಸ್ ಬಂದಿರುತ್ತಾರೆ, ಹಿಂದೆ ಮಂತ್ರಿಯಾಗಿದ್ದವರು ಬರೆದಿರುತ್ತಾರೆ, ದೊಡ್ಡ ದೊಡ್ಡ ಅಧಿಕಾರಿಗಳು ಬರೆದಿರುತ್ತಾರೆ, ಮೆಡಿಕಲ್ ಕಾಲೇಜ್ ಕೊಡಿ ಎಂದು ಹೇಳಿ ಬಿಟ್ಟು ಆದುದರಿಂದ ನಾವು ಈಗ ಕಮಿಟಿಯನ್ನು ಮಾಡಿರುವುದರಿಂದ, ಆ ಸಮಿತಿಯವರು ಏನು ವರದಿ ಕೊಡುತ್ತಾರೋ ಅಲ್ಲಿಯವರೆಗೆ ನಾವು ಕಾಯೋಣ. ಅನಂತರ ಅದರ ಬಗ್ಗೆ ನಾವು ಎಲ್ಲರೂ ಕೂತು ಚರ್ಚೆ ಮಾಡೋಣ. ಈಗ ನೀವು ಸಧ್ಯಕ್ಕೆ ಸ್ಟ್ರೈಕ್‌ನ್ನು ಕಾಲ್ ಆಫ್ ಮಾಡಿ ಎಂದು ಸ್ಪಷ್ಟವಾಗಿ ಹೇಳಿವೆ. ಅದಕ್ಕೆ ಅವರು ಹೂಂ ಅಂತ ಒಪ್ಪಿಕೊಂಡು ಹೋಗಿ, ಈಗ ಪುನ: ಈ ರೀತಿ ಮಾಡುತ್ತಿದ್ದಾರೆ. ಆದುದರಿಂದ ಈಗಲೂ ಸಹ ತಮ್ಮ ಮೂಲಕ ಮತ್ತು ಈ ಸದನದ ಮೂಲಕ ಕೇಳಿಕೊಳ್ಳುವುದೇನೆಂದರೆ... Let them call of the strike and meet the City Legislators and other Opposition Members and also the Government representative ಆರೋಗ್ಯ ಮಂತ್ರಿಗಳವರು ಇದ್ದಾರೆ, ಅವರು ಬೇಕಾದರೆ ಅವರ ಛೇಂಬರಿನಲ್ಲಿ ಕರೆಯಲಿ, ಮಾತುಕತೆ ನಡೆಸಲಿ, ಅವರು ಸ್ಟ್ರೈಕ್‌ನ್ನು ಕಾಲ್ ಆಫ್ ಮಾಡದಿದ್ದರೆ, ಅಧ್ಯಕ್ಷರೇ ನಾಳೆ ದಿವಸ ಅವರನು ಪೋಲೀಸಿನವರು ಕಾನೂನು ಪ್ರಕಾರವಾಗಿ ಅರೆಸ್ಟ್ ಮಾಡಬೇಕಾಗುತ್ತದೆ. ಏತಕ್ಕೆಂದರೆ ಅವರು ತುಂಬಾ ನಿತ್ರಾಣರಾಗಿರುತ್ತಾರೆ. ಅಧ್ಯಕ್ಷರೇ ನಾವು ಇಲ್ಲಿಯವರೆಗೆ ಲಾ ಅಂಡ್ ಆರ್ಡರನ್ನು ಸುಸೂತ್ರವಾಗಿ ಮೇನ್‌ಟೇನ್ ಮಾಡಿಕೊಂಡು ಬಂದಿರುತ್ತೇವೆ. ಮಾನ್ಯ ಶ್ರೀ ರಾಮ್‌ದೇವ್‌ರವರು ಹೇಳಿದ ಹಾಗೆ ೧ ಲಕ್ಷ ಜನ ಮುಷ್ಕರ ಮಾಡುತ್ತಿದ್ದರೂ ಸಹ ಸೌಹಾರ್ದ ವಾತಾವರಣದಲ್ಲಿ ನಡೆದುಕೊಂಡು ಹೋಗುತ್ತಿದೆ, ಇನ್ನು ಯಾವುದೇ ತರಹದ ದುರ್ಘಟನೆಗಳು ಉಂಟಾಗುವುದಕ್ಕೆ ಅವಕಾಶ ಮಾಡಿಕೊಡದೇ ಒಂದೇ ರೀತಿಯಲ್ಲಿ ಶಾಂತಿಯನ್ನುಂಟು ಮಾಡಿರಬೇಕಾದರೆ ಇದರಲ್ಲಿ ವಿಶೇಷವೇನೂ ಇಲ್ಲ. ಇವತ್ತು ಅವರು ಕ್ಯಾಪಿಟೇಷನ್ ಫೀ ಬೇಡವೆಂದು ಹೇಳಬಹುದು ಅದರ ಬಗ್ಗೆ ಚರ್ಚೆ ಮಾಡೋಣ. After all it is not a subject only for the Government. We can all sit across the table and discuss the issue and there upon let us come to an understanding. In case you all decide that we can nationalise all the medical colleges, the House could discuss the same and a decision could be arrived at. ಇವತ್ತು ದೇಶದಲ್ಲಿ ಬಡವರು ಒಂದು ಜಾತಿ, ದೊಡ್ಡವರದು ಒಂದು ಜಾತಿ ಇದೆ. ಸಾಮಾನ್ಯವಾಗಿ ಬ್ರಾಹ್ಮಣರನ್ನು ಮುಂದುವರಿದವರೆಂದು ಹೇಳುತ್ತಾರೆ, ಆದರೆ ಅವರಲ್ಲಿ ಇವತ್ತಿಗೂ ಎಷ್ಟೋ ಜನ ದೋಸೆ, ಹಾಕಿಕೊಂಡು ಚಟ್ನಿ ರುಬ್ಬಿಕೊಂಡು ಇಲ್ಲವೇ, ಆ ಪ್ರಕಾರ ಪ್ರತಿಯೊಂದು ಜಾತಿಯಲ್ಲೂ ಸಹ. there are sections, One section is richer and other one is poor. ದಾವಣಗೆರೆಯಲ್ಲಿ ಲಿಂಗಾಯಿತರ ಕಾಲೇಜ್ ಇದೆ. ಆದರೆ ಅಲ್ಲಿ ದುಡ್ಡಿರುವ ಲಿಂಗಾಯಿತರಿಗೆ ಮಾತ್ರ ಅವಕಾಶವಿರುವುದು ಎಲ್ಲರೂ ಅಲ್ಲಿ ಹೋಗಿ ವಿದ್ಯಾಭ್ಯಾಸ ಮಾಡುವುದಕ್ಕೆ ಆಗುತ್ತದೆಯೇ ಎಂದರೆ ಇಲ್ಲ. ಹಾಗೆಯೇ ಇವತ್ತು ಯಾವ ಜಾತಿನೇ ತೆಗೆದುಕೊಂಡು ನೋಡಿದರೂ ಕೂಡ, ನಾನು ನೋಡಿರುವ ಹಾಗೆ ಬಡಗಿನಿಂದ ಬಂದಿರುವವನಾದುದರಿಂದ ಅಲ್ಲಿ ಜಾತಿನೆ ಇಲ್ಲ. ಅಲ್ಲಿ ಇರುವುದೂ ದೊಡ್ಡವರು ಬಡವರು

ಅಂತ ಎರಡೇ ಜಾತಿ ಇರುವುದು. ಅವರು ಹೆಣ್ಣು ಕೊಡಬೇಕಾದರೆ ಗಂಡು ಕೊಡಬೇಕಾದರೆ ಇದನ್ನೆಲ್ಲಾ ನೋಡುತ್ತಾರೆ. ಅದರಲ್ಲಿ ಬೇರೆ ಪ್ರಶ್ನೆಯೇ ಇಲ್ಲ. ಜಾತೀಯತೆಯ ಬಗ್ಗೆ ನಮಗೆ ಅಷ್ಟು ಗೊತ್ತಿಲ್ಲ ಆ ವಿಚಾರದಲ್ಲಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಜೆ.ಎಸ್. ಪಟೇಲ್.—ಗೊತ್ತಿಲ್ಲದೇನೇ ಇಷ್ಟು ಮಾತನಾಡುತ್ತಿದ್ದೀರಿ ಇನ್ನು ಗೊತ್ತಿದ್ದರೇ ?

ಶ್ರೀ ಆರ್. ಗುಂಡೂರಾವ್.—ಜಾತಿಯತೆಯ ಬಗ್ಗೆ ಏನು ಮಾಡಿದ್ದೇನೆ ಒಂದು ಉದಾಹರಣೆ ಕೊಡಿರಿ......

ಶ್ರೀ ಕೆ. ಎಚ್. ಶ್ರೀನಿವಾಸ್.—ಉದಾಹರಣೆ ಕೊಡುವುದಕ್ಕೆ ಬಾರದೇ ಇರುವ ಹಾಗೆ ಮಾಡುತ್ತಿದ್ದೀರಿ.

(ನಗು.........)

ಶ್ರೀ ಆರ್. ಗುಂಡೂರಾವ್.—ನಮಗೆ ಗೊತ್ತಿಲ್ಲ. ಏನು ಜಾತಿ ಅಂತ, ನಿಜ ಹೇಳಬೇಕು ಎಂದರೆ ೧೯೭೨ರಲ್ಲಿ ಕಾರ್ಯದರ್ಶಿಯಾಗಿ ಬಂದ ಮೇಲೆ ಎಷ್ಟೊಂದು ಜಾತಿಗಳು ಇವೆ ಎಂಬುದು ಗೊತ್ತಾಯಿತು. ನಮ್ಮ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ಕಾಫಿ ಪ್ಲಾಂಟ್ ಇರುವವರು, ಕಾರು ಇರುವವರೇ ದೊಡ್ಡವರು, ಕಾಫಿ ಪ್ಲಾಂಟ್ ಇರುವವರೇ ಮತ್ತೊಂದು ಕಾಫಿ ಪ್ಲಾಂಟ್ ಎಸ್ಟೇಟ್‌ನವರಿಗೆ ಹೆಣ್ಣು ಮಗಳನ್ನು ಕೊಟ್ಟು ತಂದು ಮಾಡಿಕೊಳ್ಳುವುದು. ಮತ್ತೆ ಅವರು ಕಾಫಿ ಪ್ಲಾಂಟರ್ ಆಗಿಲ್ಲದಿದ್ದರೆ ಮಿಲ್ಟ್ರಿಯಲ್ಲಿ ಕರ್ನಲ್ಲೋ. ಮೇಜರ್ ಆಗಿರಬೇಕೇ ಹೊರತು ವಿಧಾನ ಸೌಧದಲ್ಲಿ ಅಟೆಂಡರ್‌ಗೆ ಕೊಡುವುದಿಲ್ಲ ಅದನ್ನು ನೋಡಿದ್ದೇನೆ. unless otherwise engaged—ಈಗಲೂ ಸಹ ಈ ಸದನದ ಮೂಲಕ ನಾವು ಮನವಿ ಮಾಡಿಕೊಳ್ಳುತ್ತಿದ್ದೇನೆ. ಅವರು ಈ ಸದನದ ಮೇಲೆ ವಿಶ್ವಾಸವಿಟ್ಟು ಸ್ಟ್ರೈಕ್‌ನ್ನು ಹಿಂದಕ್ಕೆ ತೆಗೆದುಕೊಳ್ಳಲಿ, ವಾಪಸ್ಸು ತೆಗೆದುಕೊಳ್ಳಲಿ .... ಇದರ ಬಗ್ಗೆ ನಾವು ಇಲ್ಲಿ ಬೇಕಾದರೆ ಫ್ರೆಡ್ ಬೇರ್ ಡಿಸ್ಕಸ್ ಮಾಡೋಣವೆಂದು ಅಶ್ಯೂರೆನ್ಸ್ ಕೊಡುತ್ತೇನೆ. ಕಮಿಟಿ ರಿಪೋರ್ಟ್ ಬಂದು ನಾವು ನೀವು ಇಲ್ಲಿ ಕೂತು ಚರ್ಚೆ ಮಾಡುವವರೆಗೂ ಬೇರೆ ಕಾಲೇಜ್‌ಗಳಿಗೆ ಪರ್ಮಿಷನ್ ಕೊಡುವುದಿಲ್ಲ. ೭೫ ದಿವಸದಿಂದ ಕಾರ್ಮಿಕರು ಸ್ಟ್ರೈಕ್ ಮಾಡುತ್ತಿದ್ದಾರೆ. ಆದರೆ ಅವರು ಈ ರೀತಿಯಾಗಿ ಸತ್ಯಾಗ್ರಹ ಸ್ಟ್ರೈಕ್ ಮಾಡುವುದರಿಂದ ಏನೂ ಸಾಧನೆ ಮಾಡಿದಂತಾಗುವುದಿಲ್ಲ. ಶ್ರೀ ಪಂಪಾಪತಿಯವರೇ, ಇವರದು ಇನ್ನೊಂದು ತರಹ ಸಮಸ್ಯೆ ಇದೆ, ಇವರು ಪರೀಕ್ಷೆಗಳಿಗೆ ಹೋಗಲು ಅಟೆಂಡೆನ್ಸ್ ಬೇಕಾಗುತ್ತದೆ. ಇದರಿಂದಾಗಿ ಅಟೆಂಡೆನ್ಸ್ ಕಳೆದುಕೊಳ್ಳುತ್ತಾರೆ. ಪೋಲೀಸ್‌ನವರ ಕೇಸ್‌ಗಳಿರುತ್ತದೆ. Let us discuss the issue thread bare on the floor of this House and also the report of the Committee. At this juncture let me make it very clear that I am not going to give permission to new medical colleges till the report comes from the High Power Committee and till such time the matter is discussed with various political parties. I will allow medical colleges only after discussing the issue on the floor of the House and after taking the opinion of the technical experts concerning the medicine. I once again categorically say that Government will not accord permission to new medical colleges. Therefore, let them call off the strike and leave the matter to us. You know we were able to solve the strike of the public undertakings which was going on for the last 75 days in an amicable manner. ಕಾರ್ಮಿಕರ ಸಮಸ್ಯೆ ತರಹ ಇವರ ಸಮಸ್ಯೆ ಬರುವುದಿಲ್ಲ. After all the doctors' profession is a holy profession. I have always been telling that in this country there are two holy professions. One is teachers and other is doctors. These two professions are holy professions.

SRI P. RAMDEV.—What about Politicians?

SRI R. GUNDU RAO.—It is not a holy profession.

MR SPEAKER.—There are some professional politicians.

SRI R. GUNDU RAO.—Now, Hon'ble Speaker says that there are professional politicians. We cannot rule out this. So, let us not now worry about that profession. My only appeal to the striking students is that let them have trust in us. Let them have trust in this House and leave it to us. The said same thing to the workers of the Public Sectors also. If they do so the matter could be discussed in a calm atmosphere and settlement could be arrived at. I once again appeal to them to call off the strike and leave the matter to us. I once again assure that permission will not be accorded to new medical colleges.

MATTER UNDER RULE 312

re : Permission accorded by the Divisional Forest Officer, Mercara to fell trees situated to Jumma Malaies.

MR. SPEAKER.—Now, we shall go to the next item of the Agenda. Sri M. C. Nanaiah will raise a matter regarding permission accorded by the Divisional Forest Officer, Mercara to fell trees situated in Jamma Malais, Survey No. 154/5 contrary to the provisions of the Karnataka Tree Protection Act in favour of one person.

ಶ್ರೀ ಎಂ. ಸಿ. ನಾನಯ್ಯ (ಮಡಿಕೇರಿ ಕ್ಷೇತ್ರ).—ಮಾನ್ಯ ಅಧ್ಯಕ್ಷರೇ, ನಾನು ರೂಲ್ ೩೧೨ರ ಕೆಳಗಡೆ ಒಂದು ವಿಷಯವನ್ನು ಕಳುಹಿಸಿದ್ದೆ. ಅದು ಇವತ್ತಿನ ಅಜೆಂಡಾದಲ್ಲಿ ಬಂದಿದೆ. ಅದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಇದರಲ್ಲಿ ಅಡಗಿರತಕ್ಕ ಒಂದು ದೊಡ್ಡದಾದ ಹಿನ್ನೆಲೆ ಯಾವುದು ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ವಿವರವಾಗಿ ತರಲು ಇಚ್ಛೈಪಡುತ್ತೇನೆ. ನಾನು ಕಳುಹಿಸಿರ ತಕ್ಕ ನೋಟೀಸಿನಲ್ಲಿ ಈ ರೀತಿ ಇದೆ.—

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

"The Divisional Forest Officer, Mercara, it is learnt has accorded permission to fell the trees from Jamma Malais bearing Survey No. 154/5 of 431-42 acres and other Survey numbers in Chelavara Village, Nopoklunad, Coorg District contrary to the Provisions and spirit of the Karnataka Tree Protection Act in favour of one Sri Emanual Rampuram. The Owners of Jamma Malais have no right over the trees standing on the said Jamma Malais and the Ownership is vested with the Government. The said land is situated in the Western Ghat of Coorg District and protection of trees all along the Western Ghat is the need of the hour to maintain the ecological balance of the State and District.